2. ಪ್ರಕಟಣೆ

ಮಾನ್ಯ ಸಭಾಧ್ಯಕ್ಷರು:

ಕರ್ನಾಟಕ ವಿಧಾನ ಪರಿಷತ್ತಿನ ಸಭಾಪತಿಯವರಿಂದ ಈ ಕೆಳಕಂಡ ಸಂದೇಶಗಳು ಬಂದಿರುತ್ತವೆ.

ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 118ರ ಮೇರೆಗೆ ಕರ್ನಾಟಕ ವಿಧಾನ ಪರಿಷತ್ತು ದಿನಾಂಕ 30-3-2001 ರಂದು ಈ ಕೆಳಕಂಡ ವಿಧೇಯಕಗಳನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆ.

1. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2001.
2. ಕರ್ನಾಟಕ ಪೌರನಿಗಮಗಳ (ಎರಡನೇ ತಿದ್ದುಪಡಿ) ವಿಧೇಯಕ, 2001.
3. ಕರ್ನಾಟಕ ಮೇಲ್ಪಾಟು ಮಂಡಲಿಗಳ (ತಿದ್ದುಪಡಿ) ವಿಧೇಯಕ, 2001.
4. ಕರ್ನಾಟಕ ಧನವಿನಿಯೋಗ ವಿಧೇಯಕ, 2001.
5. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, 2001
6. ಕರ್ನಾಟಕ ಸ್ಟಾಂಪು ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2001.
7. ಕರ್ನಾಟಕ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2001.
8. ಕರ್ನಾಟಕ ಆಬ್ಕಾರಿ (ತಿದ್ದುಪಡಿ) ವಿಧೇಯಕ, 2001.
9. ಕರ್ನಾಟಕ ವಿಧಾನ ಮಂಡಲದವರ ವೇತನಗಳು, ನಿವೃತ್ತಿ ವೇತನ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2000.
10. ಕರ್ನಾಟಕ ಸಚಿವರ ವೇತನಗಳು ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ, 2000.
11. ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಯಂತ್ರಣ) (ಎಡನೇ ತಿದ್ದುಪಡಿ) ವಿಧೇಯಕ, 2001.

3 ಪ್ರಶ್ನೋತ್ತರಗಳು

ತಡೆಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ರಾಣೆಬೆನ್ನೂರು ನಗರದ ದೊಡ್ಡ ಕೆರೆ ಸುಂದರೀಕರಣ

94 (1140) ಶ್ರೀ ಕೋಳಿವಾಡ ಕೃಷ್ಣಪ್ಪ ಭೀಮಪ್ಪ (ರಾಣೆಬೆನ್ನೂರು): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಣೆಬೆನ್ನೂರು ನಗರದಲ್ಲಿರುವ ದೊಡ್ಡ ಕೆರೆಯನ್ನು ಸುಂದರೀಕರಣ ಗೊಳಿಸುವ ಯೋಜನೆಯು ಸರ್ಕಾರದಲ್ಲಿ ಇದೆಯೇ;

ಆ) ಈ ಯೋಜನೆಯನ್ನು ಜಾಗತಿಕ ಬ್ಯಾಂಕಿನ ಸಹಾಯದಿಂದ ಕೈಗೊಳ್ಳಲಾಗುವುದೇ;

ಇ) ಇದರ ಅಂದಾಜು ವೆಚ್ಚ ಎಷ್ಟು;

ಈ) ಈ ಯೋಜನೆಯನ್ನು ಎಷ್ಟು ಕಾಲಾವಧಿಯಲ್ಲಿ ಪೂರ್ಣಗೊಳಿಸಲಾಗುವುದು;

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು)

ಅ) ಈ ಯೋಜನೆಗಾಗಿ 7.33 ಕೋಟಿ ರೂ. ಗಳಿಗೆ ರೇಖಾ ಅಂದಾಜು ತಯಾರಿಸಿದ್ದು, ತಾಂತ್ರಿಕ ಶಕ್ಯತೆ ಮತ್ತು ಆರ್ಥಿಕ ಶಕ್ಯತೆ ಆಧರಿಸಿ ಸಂಬಂಧಿತ ಇಲಾಖೆಗಳೊಡನೆ ಸಮಾಲೋಚಿಸಿ ಆರ್ಥಿಕ ಮೂಲ ಗುರುತಿಸಬೇಕಾಗಿರುತ್ತದೆ.

ಆ) ಸಣ್ಣ ನೀರಾವರಿ ಇಲಾಖೆಗೆ ವರ್ಷಂಪ್ರತಿ ನೀಡುವ ಅನುದಾನವು ಈಗಾಗಲೇ ಕೈಗೆತ್ತಿಕೊಂಡಿರುವ ಕಾಮಗಾರಿಗಳಿಗೆ ಸಾಲುತ್ತಿಲ್ಲವಾದ್ದರಿಂದ, ಬೇರೆ ಆರ್ಥಿಕ ಮೂಲ ಅವಲಂಬಿಸಬೇಕಾಗಿದೆ. ಈ ಯೋಜನೆಯ ವಿಶ್ವಬ್ಯಾಂಕಿನ ನೀತಿ ನಿಯಮಾವಳಿಗೆ ಒಳಪಡದಿರುವುದರಿಂದ, ವಿಶ್ವಬ್ಯಾಂಕ್ ಸಂರ್ಪಕಿಸಿರುವುದಿಲ್ಲ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಅಧ್ಯಕ್ಷರೆ, ರಾಣೆಬೆನ್ನೂರು ನಗರದಲ್ಲಿ ಸುಮಾರು 350 ಎಕರೆಗಿಂತಲೂ ದೊಡ್ಡದಾದ ಕೆರೆ ಸುಮಾರು ಏಳೂವರೆ ಕೋಟಿ ರೂಪಾಯಿ ಅಂದಾಜು ವೆಚ್ಚವಾಗುತ್ತಿದೆಯೆಂದು ತಿಳಿಸಿದ್ದಾರೆ. ಅಲ್ಲಿ ವಿಹಾರಧಾಮ ಮಾಡುತ್ತೇವೆ. ಅಂತರ್ಜಲ ವೃದ್ಧಿಯಾಗುತ್ತದೆ ರಾಣೆಬೆನ್ನೂರು ನಗರಕ್ಕೆ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಅನುಕೂಲವಾಗುತ್ತದೆಂದು ಹೇಳಿದ್ದಾರೆ. ತಾಂತ್ರಿಕ ಮತ್ತು ಆರ್ಥಿಕ ಮೂಲವನ್ನು ಹುಡುಕಬೇಕಾಗಿದೆ ಎನ್ನತಕ್ಕ ಮಾತನ್ನು ಸಹ ಹೇಳಿದ್ದಾರೆ. ದಯಮಾಡಿ ಮಂತ್ರಿಗಳು ಆರ್ಥಿಕಶಕ್ಯತೆಯನ್ನು ತಾವೇ ಮಾಡಬೇಕು. ತಾಂತ್ರಿಕಶಕ್ಯತೆಯನ್ನು ಇಂಜಿನಿಯರ್ ಡಿಪಾರ್ಟ್‌ಮೆಂಟ್‌ನವರು ಮಾಡುತ್ತಾರೆ. ಆದರೆ ಆರ್ಥಿಕ ಮೂಲವನ್ನು ತಾವು ಈ ವರ್ಷದಲ್ಲಿ ಹುಡುಕುತ್ತೀರಾ ಹೇಗೆ? ಹುಡುಕುವುದು ಬಹಳ ಅವಶ್ಯಕತೆಯಿದೆ, ಸರ್ಕಾರ ಮನಸ್ಸು ಮಾಡಿದರೆ ಒಂದು ರೀತಿಯಲ್ಲಿ ಆರ್ಥಿಕ ಮೂಲವನ್ನು ಕಂಡುಹಿಡಿಯುವುದಕ್ಕೆ ಸಾಧ್ಯವಾಗುತ್ತದೆ. ಈ ಕೆಲಸ ಬಹಳ ಅವಶ್ಯಕತೆಯಿರುವುದರಿಂದ ಈ ವರ್ಷವೇ ಪ್ರಾರಂಭ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಕೋಳಿವಾಡ್‌ರವರು ಹೇಳತಕ್ಕ ಕೆರೆಯ ಬಗ್ಗೆ ಏಳೂವರೆ ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಲಾಗಿದೆ. ಹಣಕಾಸಿನ ತೊಂದರೆಯಿಂದ ಜಲಸಂವರ್ಧನೆ ಯೋಜನೆಯಡಿಯಲ್ಲಿ ಬೃಹತ್ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ತುಂಬಾ ಕಷ್ಟವಾಗುತ್ತದೆ. ಪಟ್ಟಣ ಪ್ರದೇಶದಲ್ಲಿರತಕ್ಕ ಕೆರೆಯ ಬಗ್ಗೆ ಬೇರೆ ಆದ್ಯತೆಯ ಮೇರೆಗೆ ತೆಗೆದುಕೊಳ್ಳಬೇಕೆನ್ನುವ ವಾದವಿದೆ. ಅದೇ ರೀತಿ ಐತಿಹಾಸಿಕ ಕೆರೆಗಳನ್ನು ಯಾವರೀತಿ ಮಾಡಬೇಕೆನ್ನುವುದು ಇದೆ. ಅದು ಸೆಪರೇಟ್ ಇದೆ. ಹಾಗಾಗಿ ಮೊದಲು ನೀರಾವರಿಗೆ ಆದ್ಯತೆ ಕೊಡುವ ನಿಟ್ಟಿನಲ್ಲಿ ಈಗಾಗಲೇ ರೂಪುರೇಷೆಗಳನ್ನು

ಹಾಕಿಕೊಂಡು ಕಾರ್ಯಕ್ರಮವನ್ನು ಶುರು ಮಾಡಿ ತಕ್ಕ ಹಿನ್ನೆಲೆಯಲ್ಲಿ ನಾವು ಹಣಕಾಸಿನ ವ್ಯವಸ್ಥೆಗೆ ಕಾಯುತ್ತಿದ್ದೇವೆ. ಎರಡನೆಯದಾಗಿ ಏಳೂವರೆ ಕೋಟಿ ರೂಪಾಯಿ ಅಂದರೆ ಬಹಳ ದೊಡ್ಡದಾಗಿರತಕ್ಕ ಮೊತ್ತ. ಪಟ್ಟಣ ಪ್ರದೇಶಗಳಲ್ಲಿರತಕ್ಕ ಕೆರೆಗಳಿಗೆ ಅಂತರ್ಜಲ ವೃದ್ಧಿ ಮಾಡುವುದು ಒಂದೇ ಅಲ್ಲ. ಅಲ್ಲಿರತಕ್ಕ ವಾತಾವರಣವನ್ನು ತಿಳಿ ಮಾಡಬೇಕೆಂದು ಸಣ್ಣದಾಗಿರತಕ್ಕ ಪಾರ್ಕ್ ಮಾಡಬೇಕು. ಜನಗಳು ಓಡಾಡುವುದಕ್ಕೆ ಟ್ರ್ಯಾಕ್ ಮಾಡಬೇಕೆಂದು ಬೃಹತ್ ಕಾರ್ಯಕ್ರಮ ಈಗಾಗಲೇ ಹಮ್ಮಿಕೊಂಡು ಆಗಿದೆ. ಈ ತರಹ ಕಾರ್ಯಕ್ರಮವನ್ನು ಬೆಳಗಾಂ ಮೈಸೂರು, ತುಮಕೂರು, ಹುಬ್ಬಳ್ಳಿ-ಧಾರವಾಡ ಮತ್ತು ಶಿವಮೊಗ್ಗ-ಭದ್ರಾವತಿಯಲ್ಲಿರತಕ್ಕ ಕೆರೆಗಳ ಬಗ್ಗೆ ಈ ತರಹ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಹಣದ ಲಭ್ಯತೆಯ ಮೇಲೆ ಸಾಕಷ್ಟು ಆದ್ಯತೆ ಕೊಟ್ಟು ಮಾನ್ಯ ಕೋಳಿವಾಡ್‌ರವರು ಹೇಳತಕ್ಕ ರಾಣೆಬೆನ್ನೂರು ದೊಡ್ಡ ಕೆರೆಯನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಬಿ. ಕೋಳಿವಾಡ್: ಮಾನ್ಯ ಅಧ್ಯಕ್ಷರೆ, ಇದು ಕೇವಲ ವಿಹಾರಧಾಮ, ಕುಡಿಯುವ ನೀರು ಮತ್ತು ಅಂತರ್ಜಲ ಸಂವೃದ್ಧಿ ಮಾಡುವುದು ಅಷ್ಟೇ ಅಲ್ಲ. ಆ ಕೆರೆಯಿಂದ ಸುಮಾರು 800-900 ಎಕರೆ ಪ್ರತಿವರ್ಷ ನೀರಾವರಿಯಾಗುತ್ತಿದೆ. ನೀರಾವರಿ ಕೆರೆಗಳ ಕಾರ್ಯಕ್ರಮಗಳ ಅಡಿಯಲ್ಲಿ ಈ ವರ್ಷ ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೆ, ನೀರಾವರಿ ಕೆರೆಗಳ ಸಮಗ್ರ ಅಭಿವೃದ್ಧಿ ಮಾಡುವುದಕ್ಕೆ ಒಂದುಕೆರೆಗೆ 5 ರಿಂದ 10ಲಕ್ಷ ರೂಪಾಯಿಗಳು ಬೇಕಾಗುತ್ತದೆ. ಒಂದೊಂದು ಕೆರೆಗೆ 50 ಲಕ್ಷ ರೂಪಾಯಿಗಳವರೆಗೆ ಖರ್ಚಾಗುತ್ತದೆ. ನೀರಾವರಿಯಾಗತಕ್ಕ ಕೆಲಸಗಳು ಬೇಗ ಆಗಬೇಕೆಂದು ಜಲಸಂವೃದ್ಧಿಯೋಜನೆಯಡಿಯಲ್ಲಿ ಕೆಲಸಗಳನ್ನು ತೆಗೆದುಕೊಂಡು ಮಾಡಿಕೊಡುತ್ತೇವೆ. ಆದರ ನಂತರ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಉಳಿದಿರುವ ಕೆಲಸಗಳನ್ನು ಮಾಡುತ್ತೇವೆ.

ಶ್ರೀ ಆರಗಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೆ, ಈ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಒಂದು ಪ್ರಶ್ನೆ ಕೇಳುತ್ತೇನೆ. ಮಾನ್ಯಮಂತ್ರಿಗಳ ಉತ್ತರ ಬಹಳ ಚೆನ್ನಾಗಿದೆ. ಕೆರೆ ಕಟ್ಟಬೇಕಾದರೆ ಜಲದ ಮೂಲ ಹುಡುಕುವುದು ಸರಿ. ಆದರೆ ಆರ್ಥಿಕಮೂಲ ಹುಡುಕುವುದು ಅಂದರೇನು? ಜಲದ ಮೂಲವನ್ನು ಹುಡುಕಿ ಕೆರೆಗಳನ್ನು ಕಟ್ಟಿಸುತ್ತಾರೆ. ಈ ರೀತಿಯ ಉತ್ತರ ಕೊಡುತ್ತಾರೆ. ಹೋದಸಾರಿ ಶಿವಮೊಗ್ಗ ಜಿಲ್ಲೆಯ ನಿಧಿಗೆ ಕೆರೆ ಕಟ್ಟುವ ಬಗ್ಗೆ ಉತ್ತರ ಕೊಟ್ಟಿದ್ದಾರೆ. ಅದರ ಬಗ್ಗೆ ಏನು ಕ್ರಮ ಕೈಗೊಂಡಿದ್ದೀರಿ? ಈ ಸಾಲಿನಲ್ಲಿ ಏನಾದರೂ ಮಾಡುತ್ತೀರಾ ಎನ್ನುವುದನ್ನು ಚಯಮಾಡಿ ಮಂತ್ರಿಗಳು ಹೇಳಬೇಕು.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಣ್ಣ ನೀರಾವರಿ ಸಚಿವರು ಜಲಸಂವೃದ್ಧಿ ಯೋಜನೆಯ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತಂದಿರುವುದು ಬಹಳ ಒಳ್ಳೆಯ ವಿಚಾರ. 2 ಸಾವಿರ ಕೋಟಿ ರೂಪಾಯಿ ಸಾಲ ಮಾಡಿ ಕೆರೆಗಳ ಹೂಳನ್ನು ತೆಗೆದು ನೀರನ್ನು ನಿಲ್ಲಿಸುವುದಕ್ಕೆ ಅಂತರ್ಜಲ ಜಾಸ್ತಿ ಮಾಡುವುದಕ್ಕೆ ತಮ್ಮ ಇಲಾಖೆ ಪ್ರಯತ್ನ ಮಾಡುತ್ತಿದೆ ಎನ್ನುವ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಿದ್ದೀರಿ.

ಅಧ್ಯಕ್ಷರು: ಇದು ರಾಣೆಬೆನ್ನೂರು ಕೆರೆಯ ವಿಷಯ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಸ್ವಾಮಿ ನಾನು ಅದನ್ನೆ ಹೇಳುತ್ತಿರುವುದು. ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕು ಜಲಸಂವರ್ಧನೆ ಯೋಜನೆಯಲ್ಲಿ ಸೇರಿಲ್ಲ. ಕಡೂರು ತಾಲ್ಲೂಕು ಮಲೆನಾಡು ಜಿಲ್ಲೆಯಲ್ಲಿದೆ ಎಂದು ಹಾಗೆ ಮಾಡಿದ್ದಾರೆ. ನಮ್ಮ ತಾಲ್ಲೂಕು ಮಲೆನಾಡು ಜಿಲ್ಲೆಯಲ್ಲಿದ್ದರೂ ಮಳೆಯ ಪ್ರಮಾಣ ಕಡಿಮೆ. ವಾರ್ಷಿಕ ಸರಾಸರಿ ಮಳೆ ಕಡಿಮೆ. ನಮ್ಮ ಚಿತ್ರದುರ್ಗ ಜಿಲ್ಲೆಯಲ್ಲಿ ಯಾವರೀತಿ ಮಳೆಯಾಗುತ್ತದೆ ಅದೇ ರೀತಿ ನಮ್ಮಲ್ಲಿಯೂ ಆಗುತ್ತದೆ. ಆ ವಿಚಾರವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ಸಣ್ಣ ನೀರಾವರಿ ಸಚಿವರು ವಯಸ್ಸಿನಲ್ಲಿ ಚಿಕ್ಕವರಾದರೂ ಬಹಳ ಚೆನ್ನಾಗಿ ಅಧ್ಯಯನ ಮಾಡಿದ್ದಾರೆ. ಚಿಕ್ಕಮಗಳೂರು ಜಿಲ್ಲೆಯ ಕಡೂರು ಬಯಲು ಸೀಮೆಯಲ್ಲಿದ್ದರೂ ಅದು ಗೊತ್ತಿದ್ದರೂ ನಮ್ಮತಾಲ್ಲೂಕನ್ನು ಜಲಸಂವರ್ಧನ ಯೋಜನೆಗೆ ಏಕೆ ಸೇರಿಸಿಲ್ಲ ಎಂದು ತಮ್ಮ ಮುಖಾಂತರ ಈ ಬಗ್ಗೆ ಅವರ ಅಭಿಪ್ರಾಯವನ್ನು ಕೇಳುತ್ತೇನೆ.

ಅಧ್ಯಕ್ಷರು: ಮಾನ್ಯ ಚನ್ನಿಗಪ್ಪನವರೆ, ವಿರೋಧಪಕ್ಷದ ಮೊದಲ ಸಾಲಿನ ಬೆಂಚುಗಳು ಖಾಲಿಯಿವೆ ಅವಕ್ಕೆ ಏನು ಕಾರಣ?

ಶ್ರೀ ಎಸ್.ಪಿ. ಮುದ್ದಹನುಮೇಗೌಡ: ಚನ್ನಿಗಪ್ಪನವರ ನಾಯಕತ್ವಕ್ಕೆ ನಿನ್ನೆಯಿಂದ ಏನೋ ಸ್ವಲ್ಪ ಕುಂದು ಬಂದಹಾಗೆ ಕಾಣುತ್ತಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಈ ಸದನದಲ್ಲಿ ಖಾಯಂ ಆಗಿ ಈ ಕಡೆ 4 ಜನ ಇರುತ್ತಾರೆ. ಆ ಕಡೆಗೆ ಖರ್ಗೆಯವರು ಕಾಗೋಡುತಿಮ್ಮಪ್ಪನವರು ಚಂದ್ರೇಗೌಡರು ಇತ್ತೀಚೆಗೆ ಶ್ರೀ ಕಂಠಯ್ಯನವರು ಇರುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ: ಇವತ್ತು ವಿಶೇಷವಾಗಿ ಮಾನ್ಯ ದೇಶಪಾಂಡೆಯವರು ಕುಳಿತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಯಾವಾಗಲೂ ನಮಗೆ ದೃಷ್ಟಿ ಹಾಯಿಸುತ್ತೀರಿ ಅದಕ್ಕೆ ಅವರು ಅಬ್ಸೆಂಟ್ ಆಗುತ್ತಾರೆ. ನೀವು ಏನಾದರೂ ಕೇಳಿ ಅಂದರೆ ಕೇಳುವುದಿಲ್ಲ. ಇಲ್ಲಿ ಯಾರು ಕೂಡುತ್ತೀವೆ ಅವರಿಗೆ ಚಾನ್ಸ್ ತೊಂದರೆ ಕೊಡುತ್ತೀರಿ. ರಾತ್ರಿ 8 ಗಂಟೆ 9 ಗಂಟೆಯವರೆಗೆ ನಾವು ಇಲ್ಲಿ ಕೂಡುತ್ತೇವೆ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಣ್ಣ ನೀರಾವರಿ ಸಚಿವರನ್ನು ಮಾನ್ಯ ಕೃಷ್ಣಮೂರ್ತಿಯವರು ಶ್ಲಾಘಿಸುತ್ತಿದ್ದರು. ಅವರ ಖಾತೆಗೆ ಯೋಜನೆಯಲ್ಲಿ ಅರ್ಧದಷ್ಟು ಹಣ ಇಟ್ಟಿಲ್ಲ. ನಮ್ಮ ಕಾಲದಲ್ಲಿ 120 ಕೋಟಿ ರೂಪಾಯಿಗಳು ಇತ್ತು. ಇವತ್ತು 60-70 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಯಾವ ಮೂಲ ಹುಡುಕಿದರೂ ಅವರಿಗೇನು ಗೊತ್ತಿದೆ? ನದಿ ಮೂಲದಿಂದ ನೀರು ಹುಡುಕಿದ್ದಾರೆಯೇ? ಅವರಿಗೆ ಮೂಲ ಗೊತ್ತಿಲ್ಲ. ಅವರ ಹತ್ತಿರ ದುಡ್ಡಿಲ್ಲ. ದುಡ್ಡು ಕೊಡಬೇಕೆಂದರೆ ಅವರ ಹತ್ತಿರ ದುಡ್ಡಿಲ್ಲ. ನಿಮಗೆ ಮಾಡುತ್ತೇವೆ ಮಾಡುತ್ತೇವೆಂದು ಹೇಳುತ್ತಾರೆ. ಕೆರೆ ಕೋಡಿಗಳ ರಿಪೇರಿಗೆ ಹಣ ಇಲ್ಲ. ಮತ್ತೆ ಹಣವನ್ನು ಎಲ್ಲಿಂದ ತರುತ್ತಾರೆ? ಹೊಸ ಹೊಸ ಜಲಸಂವರ್ಧನೆ ನೀರಾವರಿ ಸೊಸೈಟಿಗಳ ಮುಖಾಂತರ ಮಾಡಿಸುವುದು ಅವರೇ

ನಿರ್ವಹಿಸತಕ್ಕದ್ದು. ಇದು ಭೂಮಂತ್ರ. ಕಣ್ಣಿಗೆ ಕಾಣುವಂತಹದ್ದು ಏನಿದೆ? ಸುಮ್ಮನೆ ಹೇಳಿಕೊಂಡು ಹೋಗುತ್ತಾರೆ. ಮೇ ಜೂನ್ ತಿಂಗಳಿನಲ್ಲಿ ಮಳೆ ಬರುತ್ತದೆ ಕೆರೆಗಳಲ್ಲಿ ನೀರು ತುಂಬಿಕೊಳ್ಳುತ್ತದೆ. ಆಗ ನಾವು ಸಚಿವರಿಗೆ ಪ್ರಶ್ನೆ ಕೇಳಿದರೆ ಎಲ್ಲಾ ಕೆರೆಗಳಲ್ಲಿ ನೀರು ತುಂಬಿದೆ ಬೇಸಿಗೆ ಬರಲಿ ಅಂದರೆ, ಅದು ಮುಂದಿನ ವರ್ಷಕ್ಕೆ ಹೋಯಿತು. ಮಿಷಿನರಿ, ಬುಲ್ಡೋಜರ್, ಜೆ.ಸಿ.ಬಿ. ಎಕ್ವಿಪ್‌ಮೆಂಟ್ಸ್ ಬೇಕಾದಷ್ಟು ಪರ್ಚೇಸ್ ಮಾಡಿ ಇಟ್ಟುಕೊಂಡಿದ್ದಾರೆ. 50 ಸಾವಿರ ಕೆರೆಗಳಲ್ಲಿ 25ಸಾವಿರ ಕೆರೆಗಳ ಹೂಳನ್ನು ತೆಗೆಯತ್ತೇವೆಂದು ಹೇಳುತ್ತಾರೆ. 50ಸಾವಿರ ಕೆರೆಗಳ ಹೂಳನ್ನು ಎತ್ತಲು ಇವರ ಇನ್‌ಫ್ರಾಸ್ಟ್ರಕ್ಚರ್ ಏನು? ಹಣ ಎಲ್ಲಿದೆ? ಈಗಾಗಲೇ 338 ಕೆರೆಗಳ ಹೂಳನ್ನು ಎತ್ತಿದ್ದೇವೆಂದು ಹೇಳುತ್ತಿದ್ದಾರೆ. ನಮ್ಮ ಕಾಲದಲ್ಲಿ ಮಾನ್ಯ ಬೈರೇಗೌಡರು ಐದೈದು ಕೆರೆ ಹೂಳೆತ್ತುವ ಕೆಲಸ ಮಾಡಿಸುತ್ತಿದ್ದರು. ಕೋಲಾರದಲ್ಲಿ ಅಲ್ಲಿ ಇಲ್ಲಿ ಮಾಡಿದ್ದಾರೆ. ತಾವು ಒಂದು ಕೆರೆಯ ಹೂಳನ್ನು ಎತ್ತಿ ಎಲ್ಲಿಯಾದರೂ ಇನಾಗ್ಯುರೇಷನ್ ಮಾಡಿದ್ದೀರಾ? ನೀವು ನೋಡುವುದಕ್ಕೆ ಬಹಳ ಸೊಗಸಾಗಿ ಕಾಣಿಸುತ್ತೀರಿ. ಹೆಣ್ಣು ಮಕ್ಕಳ ತರಹ ಕಾಣುತ್ತೀರಿ. ನಿಮ್ಮನ್ನು ನೋಡಿದರೆ ಖುಷಿಯಾಗುತ್ತದೆ. ಹಿರೋ ತರಹ ಇದ್ದೀರಿ.

12.20 ಪಿ.ಎಂ

ಅಧ್ಯಕ್ಷರು: ಸಿನೆಮಾ ನಟರೆಲ್ಲ ಯಾವಾಗಲೂ ಚೆನ್ನಾಗಿಯೇ ಇರುತ್ತಾರೆ.

ಶ್ರೀ ಬಿ.ಎನ್. ಬಚ್ಚೇಗೌಡ: ಚೆನ್ನಾಗಿ ಇದ್ದಾರೆ. ಈ 'ಜಲಸಂವರ್ಧಿನಿ' ಯನ್ನು ಪ್ರಾರಂಭಮಾಡಿ ಯಾವತ್ತಾದರೂ ಒಂದು ಕಟ್‌ಆಫ್‌ಡೇಟ್ ಇಟ್ಟುಕೊಂಡು, ಹಣ ಯಾವಾಗ ಬರುತ್ತದೆ ಆಗ ಐದಾದರೂ ನಮ್ಮಕ್ಷೇತ್ರಗಳಲ್ಲಿ ಪ್ರಾರಂಭ ಆಗಲಿ. ಇದಕ್ಕೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ಎಂದು ತಿಳಿಸಿ ಸ್ವಾಮಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಕೃಷ್ಣಮೂರ್ತಿಯವರು ಹೇಳಿರತಕ್ಕಂಥ ಮಾತಿಗೆ ನಾನು ಹೇಳುವುದು ಏನೆಂದರೆ ಈಗಾಗಲೇ ಹೋಬಳಿಗೆ ಒಂದು ಕೆರೆಯೆಂದು ಆದ್ಯತೆ ಮೇರೆಗೆ ಎಸ್ಟಿಮೇಟ್ ಎಲ್ಲಾ ತಯಾರು ಮಾಡಿಬಿಟ್ಟು ಎಲ್ಲಾ ಕಾರ್ಯಕ್ರಮಗಳನ್ನು ರೆಡಿಮಾಡುವ ಹಂತದಲ್ಲಿ ಇದ್ದೇವೆ. ಈಗ ಯಾವುದೇ ಕಾರಣಕ್ಕೂ 'ಜಲಸಂವರ್ಧಿನಿ ಯೋಜನೆ' ಇದು ಒಂದು ಭಾಗಕ್ಕೆ ಎಂದು ಹೇಳಿಲ್ಲ. ಆದರೆ 72 ಬ್ಲಾಕ್‌ಗಳನ್ನು ಅಧ್ಯಯನ ಮಾಡುವುದಕ್ಕೋಸ್ಕರ ಅಂದರೆ "ಡಾರ್ಕ್" ಮತ್ತು "ಗ್ರೇ" ಏರಿಯಾ ಎಂದು ಏನು ಮಾಡಲಾಗಿದೆ, ಅದಕ್ಕೆ ಸಮಗ್ರವಾದ ಚಿಂತನೆ ಮಾಡಿ ಈ ಯೋಜನೆಯ ಅಡಿಯಲ್ಲಿ ಇದನ್ನು ಕಾರ್ಯಕ್ರಮ ರೂಪದಲ್ಲಿ ಎರಡು-ಮೂರು ಕೆರೆಗಳನ್ನು ಈಗ ಉದಾಹರಣೆಗಾಗಿ ಯಾವರೀತಿ ಮಾಡಿದರೆ ಒಳ್ಳೆಯದೆಂದು ಮಾಡುತ್ತಿದ್ದೇವೆ. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಆಯವ್ಯಯ ಪ್ರಸ್ತಾಪ ಮಾಡುವಾಗ ಕೂಡ ಸಹ ಹೇಳಿದ್ದಾರೆ. ವಿಶ್ವಬ್ಯಾಂಕಿನಿಂದ ನಮಗೆ ಹಣ ಬೇಗ ಸಿಗುತ್ತದೆಯೋ ಇಲ್ಲವೋ ನಾವು ಹುಡ್ಕೋದಿಂದ ಇನ್ನೂರು ಕೋಟಿ ರೂಪಾಯಿಗಳನ್ನು ಮಧ್ಯದಲ್ಲಿ ಶುರು ಮಾಡತಕ್ಕಂಥ ಸಂದರ್ಭದಲ್ಲಿ ಒದಗಿಸಿಕೊಂಡು ನಮ್ಮ ಕೆಲಸ ಕಾರ್ಯಗಳನ್ನು ಶುರು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈಗಾಗಲೇ ಹೇಳಿದ್ದಾರೆ. ಈಗ ತಾವು ಹೇಳಿರತಕ್ಕಂಥ ಮಾತೇನಿದೆ ಅಂದರೆ ಈಗಾಗಲೇ ಒಂದು ವರ್ಷ ಹೋಯಿತು. ಮತ್ತೆ ಮಳೆಗಾಲ ಬರುತ್ತಿದೆ,

ಯಾವರೀತಿ ಕಾರ್ಯಕ್ರಮವನ್ನು ಮಾಡಬೇಕು ಎಂಬುದರ ಬಗ್ಗೆ ಈ ನಿಟ್ಟಿನಲ್ಲಿ ಅಧ್ಯಯನ ಮಾಡುವುದಕ್ಕಾದರೂ ಕೂಡ, ಸಂಪೂರ್ಣ ಎಸ್ಟಿಮೇಟ್ ಮಾಡುವುದಕ್ಕಾದರೂ ಕೂಡ, ನಮ್ಮ ಶಾಸಕರು ಏನು ಆದ್ಯತೆ ಮೇರೆಗೆ ಹೋಬಳಿಗೆ ಒಂದು ಕೆರೆ ಎಂದು ಹೇಳಿದ್ದಾರೆ. ಇದನ್ನು ನಾವು ಪರಿಗಣಿಸಿದ್ದೇವೆ. ಆದರೆ ಈ ಆದ್ಯತೆ ಮೇರೆಗೆ ಒಂದೊಂದು ಕೆರೆಗೆ ಐದು ಲಕ್ಷ ರೂಪಾಯಿ, ಹತ್ತು ಲಕ್ಷ ರೂಪಾಯಿ, ಕೆಲವು ಕೆರೆಗಳಿಗೆ 30 ರಿಂದ 40 ಲಕ್ಷ ರೂಪಾಯಿವರೆಗೆ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ತೆಗೆದುಕೊಂಡು ಮಾಡಬೇಕಾಗುತ್ತದೆ. ನಮಗೆ ಈಗ ಇನ್‌ಫ್ರಾಸ್ಟ್ರಕ್ಚರ್ ಮಾಡುವುದಕ್ಕೆ, ನಾವು ಯಾವ ಇಲಾಖೆಯಿಂದಲೂ ತೆಗೆದುಕೊಳ್ಳತಕ್ಕಂಥ ಕಾರ್ಯಕ್ರಮ ಇದಲ್ಲ. ಏಕೆಂದರೆ ಇದು ಟನ್ಯಾಕೀ ಬೇಸಿಸ್ ಮೇಲೆ ರೈತರ ಸಹಭಾಗತ್ವದಲ್ಲಿ, ನೀರು ಬಳಕೆದಾರರ ಸಹಕಾರ ಸಂಘ ಏನು ಮಾಡಿದ್ದೀವಿ, ಅವರ ಗಮನಕ್ಕೆ ತಂದು ಟೆಂಡರ್ ಮೂಲಕವೇ ಈ ಕೆಲಸಕಾರ್ಯಗಳನ್ನು ಮಾಡುತ್ತೇವೆಯೇ ಹೊರತು ಯಾವುದೇ ಕಾರಣಕ್ಕೆ ಇದನ್ನು ನೇರವಾಗಿ ಅಲ್ಲಿ ಇರತಕ್ಕಂಥವರಿಗೆ ಈ ಕೆಲಸ ಕಾರ್ಯಗಳನ್ನು ಕೊಡುತ್ತಿಲ್ಲ...

ಅಧ್ಯಕ್ಷರು: ಇದು ಒಂದೇ ಅಲ್ಲ. ಶಾಸಕರು ಯಾವುದು ಕೊಟ್ಟಿದ್ದಾರೆ ಅದನ್ನೇ ಹಾಕುವುದಕ್ಕೆ ಹೇಳಿ. ಏಕೆಂದರೆ ನಿಮ್ಮ ಅಧಿಕಾರಿಗಳು ಬೇರೆ ಕೆರೆಗಳನ್ನು ತಾರುತ್ತಾರೆ ಎಂದು ನನ್ನ ಗಮನಕ್ಕೆ ಬಂದಿದೆ. ದಯವಿಟ್ಟು ಶಾಸಕರು ಯಾರ ಕೆರೆ ಬರೆದುಕೊಟ್ಟಿದ್ದಾರೆ ಅದನ್ನು ಹಾಕುವುದಕ್ಕೆ ಹೇಳಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಅಧ್ಯಕ್ಷರೇ, ಆಗಬಹುದು. ಈಗ ಅದನ್ನು ಅಧ್ಯಯನ ಮಾಡುವುದಕ್ಕೋಸ್ಕರ 72 ಬ್ಲಾಕ್‌ಗಳನ್ನು ಮಾಡಿರುವಂಥಾದ್ದು. ಶಾಸಕರು ಯಾವ ಒಂದು ಆದ್ಯತೆ ಮೇರೆಗೆ ಹೋಬಳಿಗೆ ಒಂದು ಕೆರೆಯನ್ನು ಕೊಟ್ಟಿದ್ದಾರೋ, ಅದೇ ರೀತಿ ತಾವು ಈಗ ಏನು ಪ್ರಸ್ತಾಪ ಮಾಡಿದ್ದೀರಿ ಅದೇ ಆದ್ಯತೆ ಮೇರೆಗೆ ಮಾಡುವುದು ಏಕೆಂದರೆ ಮಾನ್ಯ ಶಾಸಕರಿಗೆ ತಿಳಿದಮಟ್ಟಿಗೆ ಕ್ಷೇತ್ರವಾರು ಸಮಸ್ಯೆಗಳು ಬೇರೆಯವರಿಗೆ ಗೊತ್ತಿರುವುದಿಲ್ಲ. ಅವರಿಗೆ ಕ್ಷೇತ್ರವಾರು ಸಮಸ್ಯೆಗಳು ಏನು ಎಂಬುದು ಗೊತ್ತಿರುತ್ತದೆಯೇ ಹೊರತು ಯಾವುದೇ ಅಧಿಕಾರಿಗಳಿಗಾಗಲೀ ಮತ್ತೊಬ್ಬರಿಗಾಗಲೀ ಸಮಸ್ಯೆ ಸುಲಭವಾಗಿ ಗೊತ್ತಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಏನು ಕೆರೆಗಳನ್ನು ಅಭಿವೃದ್ಧಿ ಮಾಡುವುದಕ್ಕೆ ಕೊಟ್ಟಿದ್ದಾರೋ ಆ ಕೆರೆಗಳನ್ನು ನಾವು ಈ ಅಭಿವೃದ್ಧಿ ನಿಟ್ಟಿನಲ್ಲಿ, ಯೋಜನೆಯಡಿಯಲ್ಲಿ ಸಂಪೂರ್ಣವಾಗಿ ತೆಗೆದುಕೊಳ್ಳತಕ್ಕಂಥ ಕೆಲಸ ಮಾಡುತ್ತೇವೆ.

ಅಧ್ಯಕ್ಷರು: ಇದರ ಜೊತೆಗೆ ವಯಬಲ್ ಟ್ಯಾಂಕ್ ಇರಬೇಕು. ಅಂದರೆ ಆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಹಿಂದೆ ಮೂರು-ನಾಲ್ಕು ವರ್ಷಗಳಲ್ಲಿ ಮಳೆ ಬಿದ್ದಿರುತ್ತದೆ. ಸುಮ್ಮನೆ ಶಾಸಕರು ಕೊಟ್ಟಮಾತ್ರಕ್ಕೆ ನೀವು ಹಾಕಿಕೊಳ್ಳಬೇಡಿ. ನಿಮ್ಮಲ್ಲಿರುವ ಗೇಜ್‌ನಿಂದ ಮೂರು-ನಾಲ್ಕು ವರ್ಷಗಳಿಂದ ಆ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆಬಿದ್ದಿದೆಯಾ ಇಲ್ಲವೇ ಎಂದು ನೋಡಿ; ಆಮೇಲೆ ಸಾಧ್ಯವಾದಷ್ಟು ಪಟ್ಟಣಗಳ ಪಕ್ಕದಲ್ಲಿ ಇರುವ ಕೆರೆಗಳನ್ನು ತೆಗೆದುಕೊಂಡರೆ ಪಟ್ಟಣಕ್ಕೆ ನೀರು ಸರಬರಾಜು ಮಾಡಬಹುದು. ಈಗ ನಾನು ಏನು ಮಾಡಿದ್ದೇನೆ ಎಂದರೆ ಮುಳಬಾಗಿಲು

ತಾಲ್ಲೂಕಿನಲ್ಲಿ ಪಟ್ಟಣಕ್ಕೆ ಯಾವುದು ಬೋರ್‌ವೆಲ್ ಹಾಕಿದ್ದಾರೋ ಅದನ್ನು ಕೊಟ್ಟಿದ್ದೇನೆ. ಇದರಿಂದ ಡಬಲ್ ಅಡ್ವಾಂಟೇಜ್ ಆಗುತ್ತದೆ. ನೀರು ಸಿಗುತ್ತದೆ ಮತ್ತು ಕೆರೆಯ ಹೂಳು ಎತ್ತಿದಹಾಗೆ ಆಗುತ್ತದೆ. ಅಂತಹ ಪಯಬಲ್ ಟ್ಯಾಂಕ್‌ಗಳನ್ನು ನೋಡಿ ಕೆಲವು ಪ್ರಿನ್ಸಿಪಲ್ಸ್ ಇಟ್ಟುಕೊಂಡು ಮಾಡಿ.

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಸಭಾಧ್ಯಕ್ಷರೇ, ಕೆರೆಗಳ ಬಗ್ಗೆ ತಾವು ಅಭಿಪ್ರಾಯ ವ್ಯಕ್ತಪಡಿಸಿದುದ್ದು ನಮಗೆ ಬಹಳ ಸಂತೋಷವಾದ ವಿಚಾರ. ಇಲ್ಲಿ ಬಳ್ಳಾರಿಯಲ್ಲಿ ಕುಳಿತಿರುವ ಅಧಿಕಾರಿಗಳು ನಿರ್ಧಾರ ಮಾಡಬಾರದು. ಯಾರು ಶಾಸಕರು ಜನಪ್ರತಿನಿಧಿಯಾಗಿದ್ದಾರೆ. ಅವರು ಏನು ಪಟ್ಟಿಯನ್ನು ಕೊಡುತ್ತಾರೆ ಅದರ ಪ್ರಕಾರ ಮಾನ್ಯ ಮಂತ್ರಿಗಳು ಮಾಡಬೇಕು. ಯಾವುದೇ ಕಟ್ಟೆಯನ್ನು ಪ್ರಯೋಗಕ್ಕೋಸ್ಕರ ಮಾಡಿದರೆ ಅದು ಯೋಜನೆ ಫಲಪ್ರದವಾಗುವುದಿಲ್ಲ.

ಅಧ್ಯಕ್ಷರು: ಶಾಸಕರು ಕೊಡುವುದರಲ್ಲೂ ಸಹ ಪಯಬಲ್ ಟ್ಯಾಂಕ್ಸ್ ಕೊಡಬೇಕು. ಕ್ಯಾಚ್‌ಮೆಂಟ್ ಏರಿಯಾದಲ್ಲಿ ಮಳೆಯೇ ಇಲ್ಲದೆ ಕೊಟ್ಟುಬಿಟ್ಟರೆ ಏನು ಮಾಡಬೇಕು?

ಶ್ರೀ ಕೆ.ಎಂ. ಕೃಷ್ಣಮೂರ್ತಿ: ಕ್ಯಾಚ್‌ಮೆಂಟ್ ಏರಿಯಾದಲ್ಲಿ ಇರುವುದನ್ನೇ ನಾವು ಕೊಡುತ್ತೇವೆ. ಹಿಂದಿನ ತಮ್ಮ ರಿಪೋರ್ಟನ್ನು ತೆಗೆದುಕೊಂಡು ಮಾಡಿ.

ಅಧ್ಯಕ್ಷರು: ಕುಮಾರ್ ಬಂಗಾರಪ್ಪನವರೇ, ಗುರುತುಹಾಕಿಕೊಳ್ಳಿ. ಪಯಬಲ್ ಟ್ಯಾಂಕ್ಸ್, ಸಾಧ್ಯವಾದಷ್ಟು ಟೌನ್‌ಗಳ ಪಕ್ಕದಲ್ಲಿ ಅಲ್ಲಿ ಎಲ್ಲಿ ಬೋರ್‌ವೆಲ್‌ಗಳನ್ನು ಹಾಕಿರುತ್ತಾರೋ ಅಲ್ಲಿ ಕೆರೆಗಳ ಹೂಳು ಎತ್ತಿ ಮಾಡಿದರೆ ಟೌನ್‌ಗಳ ನೀರಿಗೂ ಕೂಡ ಅದು ಸಹಾಯಕವಾಗಿರುತ್ತದೆ.

ಶ್ರೀ ವಿ. ಕೃಷ್ಣಪ್ಪ: ಸನ್ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಈ ನೀರಾವರಿ ಸಹಕಾರಿ ಸಂಘಗಳ ಬಗ್ಗೆ ಹೇಳಿದರು. ಆದರೆ, ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅವಕ್ಕೆ ಹಣ ಕೊಡುತ್ತೇವೆ, ಅಧಿಕಾರ ಕೊಡುತ್ತೇವೆ ಎಂದು ಹೇಳಿದರು. ಆದರೆ ಇದುವರೆಗೂ ಈ ಸಂಘಗಳನ್ನು ಪ್ರಾರಂಭ ಮಾಡಿಲ್ಲ. ಸಂಘಗಳನ್ನು ನಾವು ಹರಿಬಿರಿಯಾಗಿ ರಿಜಿಸ್ಟರ್ ಮಾಡಿದ್ವಿ. ಈಗ ಮೊನ್ನೆ ಮಂತ್ರಿಗಳು ಏನು ಹೇಳುತ್ತಿದ್ದಾರೆ ಎಂದರೆ ಸಹಕಾರ ಸಂಘಗಳ ಮುಖಾಂತರವೇ ಕೆರೆಗಳನ್ನು ಕೊಡುತ್ತೇವೆ ಎಂದು. ಕೆಲವು ಕಡೆ ಸಂಘಗಳನ್ನು ರಿಜಿಸ್ಟರ್ ಮಾಡಿಸಿಲ್ಲ. ಇದರ ಬಗ್ಗೆ ಏನು ಮಾಡುತ್ತೀರಿ?, ಹೋಬಳಿಗೆ ಒಂದು ಕೊಡುತ್ತೇವೆ ಎಂದು ಹೇಳುತ್ತಾರೆ. ಮಾನ್ಯ ಬಚ್ಚೇಗೌಡರು ಹೇಳಿದಹಾಗೆ ನಮಗೆ ಈಗ ಮಳೆಗಾಲ ಪ್ರಾರಂಭವಾಗುತ್ತಿದೆ. ಆದರೆ ಕಳೆದವರ್ಷದ್ದು ಒಂದೇ ಒಂದು ಕೆರೆ ಕೂಡ ಆಗಿಲ್ಲ. ಅದನ್ನು ಯಾವಾಗ ಶುರುಮಾಡುತ್ತೀರಿ? ಇದು ಆಗುತ್ತದೆಯೆ?

ಅಧ್ಯಕ್ಷರು: ಕೃಷ್ಣಪ್ಪನವರೇ, ವರ್ಲ್ಡ್‌ಬ್ಯಾಂಕಿನಿಂದ ಹಣ ಬರಬೇಕಲ್ಲ?

ಶ್ರೀ ವಿ. ಕೃಷ್ಣಪ್ಪ: ಅವರು ಸದನಕ್ಕೆ ಏಕೆ ಸುಳ್ಳು ಹೇಳುತ್ತಾರೆ?

ಅಧ್ಯಕ್ಷರು: ಆಯಿತು. ಅವರು ಉತ್ತರ ಹೇಳುತ್ತಾರೆ ಬಿಡಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಈಗಾಗಲೇ ನಾನು ಸಂಪೂರ್ಣ ವಿವರಗಳನ್ನು ಸದನಕ್ಕೆ ನೀಡಿದ್ದೇನೆ. ಅಂದರೆ ಹಣಕಾಸಿನ ಲಭ್ಯತೆ ಮೇಲೆ ಈ ಕಾರ್ಯಕ್ರಮವನ್ನು ಸಂಪೂರ್ಣ ಮಟ್ಟದಲ್ಲಿ ಶುರುಮಾಡುತ್ತೇವೆಯೆಂದು ನಾನು ಹೇಳಿದ್ದೇನೆ. ಈಗ ನೀರು ಬಳಕೆದಾರರ

ಸಹಕಾರ ಸಂಘಗಳನ್ನು ಸುಮಾರು 1,400ನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ಗುರುತು ಮಾಡಿದ್ದೇವೆ. ಅದರಲ್ಲಿ ರಿಜಿಸ್ಟರ್ ಆಗಿರತಕ್ಕಂಥಾದ್ದು ಸುಮಾರು 600 ಬಿಲ್ಲರೆ. ಅವರಿಗೆ ಬೇಕಾಗಿರತಕ್ಕಂಥ, ಸೂಕ್ತವಾಗಿರತಕ್ಕಂಥ ಅಧಿಕಾರ ಕೊಡಬೇಕೆಂದು ನಮ್ಮ ಸಹಕಾರ ಸಚಿವರಿಂದ ಅಲ್ಲಿರತಕ್ಕಂಥ ಸೆಕ್ರೆಟರಿಗಳು ಯಾರಿದ್ದಾರೆ, ಅವರನ್ನು ಈಗಾಗಲೇ ಸೆಕ್ರೆಟರಿಗಳು ಎಂದು ಹೇಳಿಬಿಟ್ಟು ಆರ್ಡರ್ ಮಾಡಿಸಿದ್ದೇವೆ. ಅವರು ಲೆಕ್ಕ ಪತ್ರಗಳನ್ನು ಮಾಡಬೇಕು. ಏಕೆಂದರೆ ನಾವು ಇಷ್ಟೂ ತಯಾರು ಮಾಡಲಿಲ್ಲ ಎಂದರೆ ನಾವು ಹಣಕಾಸು ಕೊಡತಕ್ಕಂಥ ಸಂದರ್ಭದಲ್ಲಿ ಅದನ್ನು ಸಹಕಾರ ಸಂಘಗಳಲ್ಲಿ ನೋಡಿ ಕೊಳ್ಳುವವರು ಯಾರು, ಲೆಕ್ಕಪತ್ರ ಬರೆಯುವವರು ಯಾರು ಎನ್ನುವ ಸಮಸ್ಯೆ ಆಗುತ್ತದೆ. ನಾಳೆದಿವಸ ಎಲ್ಲಿ ಕುಳಿತುಕೊಳ್ಳಬೇಕು ಎನ್ನುವುದು ಸಮಸ್ಯೆ ಆಗುತ್ತದೆ. ಎಲ್ಲಿ ಮೀಟಿಂಗ್ ಕಂಡಕ್ಟ್ ಮಾಡಬೇಕು ಎಂದು ಹೇಳುವುದು ಕೂಡ ಸಮಸ್ಯೆ ಆಗುತ್ತದೆ. ಅದಕ್ಕಾಗಿ ಸೂಕ್ತವಾಗಿರತಕ್ಕಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದಕ್ಕೆ ಮುಂಚೆ ವಿಚಾರ ಮಾಡಬೇಕು ಏಕೆಂದರೆ ಇದು ಹೊಸದಾಗಿ ಬಂದಿರತಕ್ಕಂಥ ಕಾರ್ಯಕ್ರಮ. ಆದ್ದರಿಂದ ಇದಕ್ಕೆ ಸ್ವಲ್ಪ ಸಮಯ ಕೊಟ್ಟು ರೈತರಿಗೆ ಮಾಹಿತಿ ಕೊಡತಕ್ಕಂಥ ವಿಚಾರ ಸಹ ಇಟ್ಟುಕೊಂಡಿದ್ದೇವೆ. ಆದ್ದರಿಂದಲೇ 'ಜಲಸಂವರ್ಧನ ಯೋಜನೆ' ಯನ್ನು ಮಾಡಿಕೊಂಡು ಅದರ ಮೂಲಕ ಮಾಹಿತಿಯನ್ನು ಸಂಪೂರ್ಣವಾಗಿ ಕರ್ನಾಟಕ ರಾಜ್ಯದ ರೈತರಿಗೆ ಕೊಡತಕ್ಕಂಥ ಜವಾಬ್ದಾರಿಯನ್ನು ನಮ್ಮ ಯೋಜನಾಸಂಘ ಹೊತ್ತುಕೊಂಡಿದೆ. ಈ ಹಣಕಾಸು ಬರುವುದಕ್ಕೆ ಮುಂಚಿತವಾಗಿ ಸಮಗ್ರವಾಗಿ ಮಾಹಿತಿಯನ್ನು ರೈತರಿಗೆ ಕೊಟ್ಟುಬಿಟ್ಟು, ಈಗ ಸನ್ಮಾನ್ಯ ಕೃಷ್ಣಮೂರ್ತಿಯವರು ಏನು ಪ್ರಸ್ತಾಪ ಮಾಡಿ ಹೋಬಳಿಗೆ ಒಂದು ಶಾಸಕರು ಕೊಡತಕ್ಕಂಥ ಕೆರೆಯನ್ನು ತೆಗೆದುಕೊಳ್ಳಬೇಕೆಂದು ಹೇಳಿದರು, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಮತ್ತು ಅಧ್ಯಕ್ಷರು, ತಾವೇನು ಮಾರ್ಗದರ್ಶನ ಮಾಡಿದ್ದೀರಿ, ಪಟ್ಟಣಪ್ರದೇಶಗಳಲ್ಲಿ ಇರತಕ್ಕಂಥ ಕೆರೆಯನ್ನು ತೆಗೆದುಕೊಂಡರೆ ಕುಡಿಯುವ ನೀರಿಗೂ ಅನುಕೂಲವಾಗಬೇಕು, ನೀರಾವರಿಗೂ ಅನುಕೂಲವಾಗಬೇಕು ಅಭಿವೃದ್ಧಿಯಾಗಬೇಕು. ನಾಳೆ ದಿವಸ ಅಲ್ಲಿರತಕ್ಕಂಥ ವಾತಾವರಣ ಕೂಡ ಸ್ವಚ್ಛವಾಗಿರಬೇಕೆಂದು ತಾವು ಗೈಡ್‌ಲೈನ್ಸ್ ಏನು ಕೊಟ್ಟಿದ್ದೀರಿ, ತಮ್ಮ ಮಾರ್ಗದರ್ಶನವನ್ನು ಪಾಲಿಸುವ ಸಂಪೂರ್ಣ ಜವಾಬ್ದಾರಿಯನ್ನು ನಾನು ತೆಗೆದುಕೊಂಡು ಈ ಕಾರ್ಯಕ್ರಮವನ್ನು ಬರುವ ಹಣಕಾಸು ವ್ಯವಸ್ಥೆ ಆದ ತಕ್ಷಣವೇ ಕರ್ನಾಟಕ ರಾಜ್ಯದ ಜನತೆಗೆ ಕೊಡತಕ್ಕಂಥ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಹೆಚ್. ಹನುಮೇಗೌಡ: ಸನ್ಮಾನ್ಯ ಅಧ್ಯಕ್ಷರೇ, ಹಾಸನ ಟೌನ್ ಪಕ್ಕ ಚನ್ನಪಟ್ಟಣ ಎಂದು ಒಂದು ಗ್ರಾಮ ಇದೆ. 16ನೇ ಶತಮಾನದಲ್ಲಿ ಒಬ್ಬ ಪಾಳೇಗಾರ ಪುಣ್ಯಾತ್ಮ ಕಟ್ಟಿರತಕ್ಕಂಥಾದ್ದು ಅದು. ಆದರಿಂದ ವರ್ಷಕ್ಕೆ ಎರಡು ಬೆಳೆ ಬರುತ್ತಿತ್ತು. ಹಾಸನ ಟೌನಿನ ಅರ್ಧಭಾಗಕ್ಕೆ ಬೋರ್ ಹಾಕಿದರೆ ನೀರು ಬರುತ್ತಿತ್ತು. ಈಗ ಯಾರಿಗೋ ಪ್ರೇರಣೆಯಾಗಿ ಅಮಾವಾಸ್ಯೆ ರಾತ್ರಿ 12 ಗಂಟೆಗೆ ಆ ಕೆರೆಯನ್ನು ಒಡೆದಿದ್ದಾರೆ. ಈಗ ಆರೇಳು ವರ್ಷಗಳಿಂದ ಬೆಳೆ ಕೂಡ ಇಲ್ಲವಾಗಿದೆ. ಹಾಸನದಲ್ಲಿ ಅರ್ಧಭಾಗ ಬೋರ್‌ವೆಲ್‌ಗಳೆಲ್ಲ ಒಣಗಿಹೋದವು. ಸ್ವಾಮಿ, ತಾವು ಒಂದು ಸಾರಿ ಬಂದಿದ್ದಾಗ ನಾನು ಕೂಡ ಬಂದಿದ್ದೆ. ದಯವಿಟ್ಟು ಕೋಡಿ ಒಡೆದಿರುವ ಭಾಗವನ್ನು ಮುಚ್ಚಿಬಿಟ್ಟು ವ್ಯವಸಾಯಕ್ಕೆ ಅನುಕೂಲಮಾಡಿಕೊಡಿ ಎಂದು ಗ್ರಾಮಸ್ಥರು ತಮ್ಮನ್ನು ಕೇಳಿದ್ದರು. ತಾವು ಕೂಡ ಒಪ್ಪಿಕೊಂಡಿರಿ. ಆದರೆ ಈಗ ಒಂದೂವರೆ ವರ್ಷವಾದರೂ ಏನೂ ಮಾಡಿಲ್ಲ.

ಸ್ವಾಮಿ, ಆ ಕೆರೆಯನ್ನು ಏನಾದರೂ ರೆಸ್ಟೋರ್ ಮಾಡಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡುತ್ತೀರಾ? ಅದರಿಂದ ರೈತರೂ ಬದುಕುತ್ತಾರೆ. ಮತ್ತು ಹಾಸನ ಟೌನಿನ ಬತ್ತಿಹೋಗಿರತಕ್ಕಂಥ ನೂರಾರು ಕೊಳವೆಬಾವಿಗಳಿಗೆ ನೀರು ಕೂಡ ಬರುತ್ತದೆ. ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂದು ದಯವಿಟ್ಟು ತಿಳಿಸಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಈ ಚನ್ನಪಟ್ಟಣ ಕೆರೆ ಬಗ್ಗೆ ಮಾನ್ಯ ಹನುಮೇಗೌಡರು ಹೇಳಿದ್ದಾರೆ. ಅದು ಬಹಳ ದೊಡ್ಡದಾಗಿ ಇರತಕ್ಕಂಥ ಕೆರೆ. ನಾನೇ ಖುದ್ದಾಗಿ ಹೋಗಿದ್ದಂಥ ಸಂದರ್ಭದಲ್ಲಿ ನಾನು ಅದನ್ನು ನೋಡಿದ್ದೇನೆ. ಇದನ್ನು ಯಾವ ಕಾರಣದಿಂದ ಸಂಪೂರ್ಣವಾಗಿ ಬ್ರೀಚ್ ಮಾಡಿದ್ದಾರೋ ಗೊತ್ತಿಲ್ಲ. ಅದರ ಅರ್ಧಭಾಗವನ್ನು ರೈಲ್ವೆ ಸ್ಟೇಷನ್‌ಗೆ ಎಂದು ಮಾಡಿದ್ದಾರೆ, ಇಸ್ರೊಗೆ ಎಂದು ಮಾಡಿದ್ದಾರೆ. ಹೀಗೆ ಆ ಜಾಗವನ್ನು ಹತ್ತಾರು ವಿಚಾರಣೆಗಳಿಗೆ ಕೊಟ್ಟುಬಿಟ್ಟು ಅದರಲ್ಲಿ ಒಂದು ಭಾಗ ಮಾತ್ರ ನೀರಾವರಿಗೆಂದು ಜಲಸಂವರ್ಧಿನಿಗೆಂದು ಇಟ್ಟಿರತಕ್ಕಂಥ ಜಾಗವಾಗಿದೆ. ಈಗ ಇದನ್ನು ನಾವು ಸಂಪೂರ್ಣವಾಗಿ ಅಭಿವೃದ್ಧಿ ಮಾಡಬೇಕು ಎಂದರೆ ಕಷ್ಟ. ಮುಂಚೆ ಇದ್ದ ಇಡೀ ಕೆರೆಯನ್ನು ಅಭಿವೃದ್ಧಿ ಮಾಡಬೇಕೆಂದರೆ ತುಂಬ ಸುಲಭ ಇತ್ತು. ಏಕೆಂದರೆ ಸುಮ್ಮನೆ ಒಂದು ಬಂಡ್ ಹಾಕಿದ್ದನ್ನು ಮತ್ತೊಂದು ಸಾರಿ ಕನ್‌ಸ್ಟ್ರಕ್ಷನ್ ಮಾಡಿದರೆ ಸಾಕಾಗಿತ್ತು. ಈಗ ಅದನ್ನು ಕನ್‌ಸ್ಟ್ರಕ್ಷನ್ ಮಾಡಬೇಕು ಎಂದರೆ ಸಮಗ್ರವಾಗಿ ಹೊಸಕರೆ ತರಹವೇ ನಿರ್ಮಾಣ ಮಾಡಬೇಕಾಗುತ್ತದೆ ಎಂಬುದು ಇದು ನಮಗೂ ತಮಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಈಗ ಏನು ಆ ಕೆರೆಗೋಸ್ಕರ ಜಾಗ ಬಿಟ್ಟಿದ್ದಾರೆ ಆ ಜಾಗವನ್ನು ಸಮಗ್ರವಾಗಿ ಅಭಿವೃದ್ಧಿ ಮಾಡತಕ್ಕಂಥ ನಿಟ್ಟಿನಲ್ಲಿ ನಾನು ಇವತ್ತು ಕ್ರಮ ತೆಗೆದುಕೊಳ್ಳುವುದನ್ನು ಮಾಡುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ: ಸನ್ಮಾನ್ಯ ಅಧ್ಯಕ್ಷರೇ, ಕೆರೆ ಹೂಳು ಎತ್ತತಕ್ಕ ಈ ಕಾರ್ಯಕ್ರಮ ಒಳ್ಳೆಯ ಕಾರ್ಯಕ್ರಮ. ಆದರೆ, ನೂರಾರು ವರ್ಷಗಳಿಂದ ಹೂಳು ಬಿದ್ದಿರತಕ್ಕ ಕೆರೆಗಳು ಇವೆ. ಇಂತಹ ಕೆರೆಗಳ ಹೂಳೆತ್ತುವ ಖರ್ಚು ಏನು ಬರುತ್ತದೆ, ಅದರಲ್ಲಿ ಹೊಸ ಕೆರೆ ಮಾಡಲಿಕ್ಕೂ ಅವಕಾಶವಿದೆ. ಕಾನೂನು ರೀತಿ ಕೆರೆ ಹೂಳೆತ್ತುವ ಸಂದರ್ಭದಲ್ಲಿ, ಅದರಿಂದ ಬಂದಂಥ ಶಿಲ್ಪ್ ಏನಿದೆ, ಅದನ್ನು ಆ ಭಾಗದ ರೈತರು ಎತ್ತಿಕೊಂಡು, ಅವರ ಹೊಲಗಳಿಗೆ ಸಾಗಿಸಬೇಕೆಂದು ಇದೆ. ಹಳೆಯ ಕೆರೆಗಳ ಹೂಳನ್ನು ತೆಗೆಯಲಿಕ್ಕೆ ಹೋದರೆ, ಅದನ್ನು ಸಾಗಿಸಲಿಕ್ಕೆ ಸಾಧ್ಯವೇ ಇಲ್ಲ. ಅಷ್ಟು ಶಿಲ್ಪ್ ಅದರೊಳಗೆ ಬರುತ್ತದೆ. ಹಾಗಿದ್ದ ಮೇಲೆಗೆ, ಅದಕ್ಕೆ ಇನ್‌ವೆಸ್ಟ್ ಮಾಡತಕ್ಕ ಹಣವನ್ನು, ಅದೇ ಹಣದಲ್ಲಿ ಹೊಸ ಕೆರೆಗಳನ್ನು ಮಾಡಿದರೆ ಅರ್ಧ ಖರ್ಚಿನಲ್ಲೇ ಆಗುತ್ತದೆ. ಇದಕ್ಕೇನಾದರೂ ಕಾನೂನಿನಲ್ಲಿ ತಿದ್ದುಪಡಿ ಮಾಡಿ ಕ್ರಮ ಕೈಗೊಳ್ಳಬೇಕು. ರಿಪೇರಿ ಮಾಡುವುದು ಒಂದೇ ಅಥವಾ ಶಿಲ್ಪ್ ತೆಗೆಯುವುದು ಒಂದೇ ಎಂದಾದರೆ, ಅನೇಕ ಕೆರೆಗಳನ್ನು ಪೂರ್ಣ ಮಾಡಲಿಕ್ಕೆ ಸಾಧ್ಯವಿಲ್ಲ. ಅರ್ಧ ಖರ್ಚಿನಲ್ಲಿ ಬೇರೆ ಕೆರೆಯನ್ನು ಮಾಡಲಿಕ್ಕೆ ಸಾಧ್ಯವೇ, ಅದಕ್ಕೆ ಅವಕಾಶ ಇದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

ಶ್ರೀ ಬೆಲ್ಲದ್ ಚಂದ್ರಕಾಂತ ಗುರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಧಾರವಾಡದಲ್ಲಿ ಒಂದು ಹಿರೇಕೆರೆ ಎಂದು ಊರು ಪಕ್ಕದಲ್ಲೇ ಇದೆ. ತಾವೇನು ಹೇಳುತ್ತಿದ್ದೀರಿ, ಆ ಪ್ರಕಾರ ಆ ಕೆರೆ, ಧಾರವಾಡ ನಗರಕ್ಕೆ ಬಹಳ ಮಹತ್ವದ ಕೆರೆ. ಆ ಕೆರೆ ಹೂಳು ತೆಗೆದರೆ ಸುತ್ತಮುತ್ತಲ ಎಲ್ಲಾ ಬಾವಿಗಳಿಗೆ ಮತ್ತು ಬೋರ್‌ಗಳಿಗೆ ಅನುಕೂಲವಾಗುತ್ತದೆ. ಈಗಂತೂ ಧಾರವಾಡ ಮತ್ತು

ಹುಬ್ಬಳ್ಳಿಯಲ್ಲಿ ಕುಡಿಯುವ ನೀರಿಗೆ ದೊಡ್ಡ ಸಮಸ್ಯೆ ಇದೆ. ಮೇಲಿಂದ ಮೇಲೆ ಈ ಪ್ರಶ್ನೆಯನ್ನು ಇಲ್ಲಿ ಎತ್ತುತ್ತಲೇ ಇದ್ದೇವೆ. ಕುಡಿಯುವ ನೀರಿನ ಬವಣೆ ಇವತ್ತು ಧಾರವಾಡ ಹುಬ್ಬಳ್ಳಿಗೆ ಬಹಳ ದೊಡ್ಡದಾಗಿದೆ. ಆ ಕೆರೆ ಹೂಳು ತೆಗೆಸಿದರೆ ಮತ್ತು ಆ ಹೂಳಿನಿಂದ ರೈತರೆಲ್ಲಾ ಪಾರ್ಟಿಸಿಪೇಷನ್ ಮಾಡಿ ಮಣ್ಣು ಒಯ್ಯುತ್ತಿದ್ದಾರೆ. ಇವರು ಬರೀ ನಾಲ್ಕೈದು ಜೆ.ಸಿ.ಬಿ ಹಚ್ಚಬೇಕು. ಆ ಕೆರೆಗೆ ನಾಲ್ಕೈದು ಜೆ.ಸಿ.ಬಿ. ಹಚ್ಚಿದರೆ, ಮಳೆ ಬರುವುದರೊಳಗೆ, ಆ ಕೆರೆಯೊಳಗಿನ ಹೂಳು ಏನಿದೆ, ರೈತರು ತಮ್ಮ ಹೊಲಗಳಿಗೆ ಒಯ್ಯುತ್ತಾರೆ. ಮತ್ತು ಅಲ್ಲಿ ನೀರು ಹೆಚ್ಚು ಬರುವುದರಿಂದ ಸುತ್ತಮುತ್ತಲ ಬಾವಿ ಮತ್ತು ಬೋರ್‌ಗಳಿಗೆ ಜಲ ಹೆಚ್ಚಾಗುತ್ತದೆ. ಇಷ್ಟೇ ಅಲ್ಲ, ಅದು ನೀರಾವರಿಯಾಗುವಂಥ ಕೆರೆ. ಸುತ್ತಮುತ್ತಲ ಭೂಮಿಗಳಿಗೆ ನೀರೂ ಸಿಗುತ್ತದೆ. ದಯವಿಟ್ಟು ನಾನು ಅವರಿಗೆ ರಿಕ್ವೆಸ್ಟ್ ಮಾಡುತ್ತಿದ್ದೇನೆ. ಬಹುಶಃ ಈಗ ಅರ್ಧಂಬರ್ಧವಾದ ಕೆಲಸವನ್ನು ಪೂರ್ಣ ಮುಗಿಸಿದರೆ, ಧಾರವಾಡ ನಗರಕ್ಕೆ ಅದರಿಂದ ಏನಾದರೂ ಪ್ರಯೋಜನವಾಗುತ್ತದೆ. ಮತ್ತು ಸುತ್ತಮುತ್ತಲ ರೈತರಿಗೂ ಅನುಕೂಲ ಆಗುತ್ತದೆ. ಭೂಮಿಯಲ್ಲಿ ನೀರಾವರಿಯಾಗುತ್ತದೆ. 5 ಜೆ.ಸಿ.ಬಿ. ಯನ್ನು ನಾಳೆಯೇ ಅವರಿಗೆ ಕಳುಹಿಸಿಕೊಡಬೇಕೆಂದು ರಿಕ್ವೆಸ್ಟ್ ಮಾಡಿಕೊಂಡಿದ್ದೇನೆ. ಈಗ ತಮ್ಮ ಮುಂದೆಯೂ ರಿಕ್ವೆಸ್ಟ್ ಮಾಡಿಕೊಳ್ಳುತ್ತಿದ್ದೇನೆ. ಇದಕ್ಕೆ ಅವರೇನು ಉತ್ತರ ಹೇಳುತ್ತಾರೋ ಅದನ್ನು ಹೇಳಲಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಬೆಲ್ಲದ್‌ರವರು ಹೇಳಿದ ಹಾಗೆ, ಈಗಾಗಲೇ ಆ ದೊಡ್ಡಕೆರೆ ಕೆಲಸವನ್ನು ತೆಗೆದುಕೊಂಡು ಹೋದಸಾರಿ ಅದಕ್ಕೆ ಕೋಡಿ ಎಲ್ಲಾ ಹಾಕಿಬಿಟ್ಟು ಪೂರ್ಣ ಮಾಡಿದ್ದೇವೆ. ನಾನೇ ಖುದ್ದಾಗಿ ಹೋಗಿ ಅದನ್ನು ಪರಿಶೀಲನೆ ಮಾಡಿದ್ದೇನೆ. ಅದರ ಏರಿಯನ್ನು ಕೂಡ ಬಂದೋಬಸ್ತ್ ಮಾಡಲಾಗಿದೆ. ಹೋದ ಸಾರಿ ನಾವು ಹೋದಾಗ ಬಹಳಷ್ಟು ಟ್ರಾಕ್ಟರುಗಳು ಬಂದು ರೈತರೇ ಆ ಹೂಳನ್ನು ತೆಗೆದುಕೊಂಡು ಹೋಗತಕ್ಕ ಕೆಲಸವನ್ನು ಮಾಡಿದ್ದಾರೆ. ಆಗ ನಾವು ಕೂಡ ಹೇಳಿದ್ದೇವೆ. ಇದಕ್ಕೆ ಬೇಕಾಗಿರತಕ್ಕ ಸಹಕಾರವನ್ನು ನಮ್ಮ ಇಲಾಖೆಯಿಂದ ಕೊಡುತ್ತೇವೆಂದು ಹೇಳಿದ್ದೇವೆ. ಈಗ ಅವರಿಗೆ ಜೆ.ಸಿ.ಬಿ ಯನ್ನು ಕಳುಹಿಸಿಕೊಟ್ಟರೆ, ಅವರಿಗೆ ಉಪಯೋಗವಾಗುತ್ತದೆ ಎನ್ನುವ ಮಾತನ್ನು ಆಡಿದ್ದಾರೆ. ಅವರಿಗೆ ತತ್‌ಕ್ಷಣ, ಬೇಕಾಗಿರತಕ್ಕ ವಸ್ತುಗಳನ್ನು ನಮ್ಮ ಇಲಾಖಾ ವತಿಯಿಂದ ಕಳುಹಿಸಿಕೊಡತಕ್ಕ ವ್ಯವಸ್ಥೆಯನ್ನು ಮಾಡುತ್ತೇವೆ. ಸನ್ಮಾನ್ಯ ಶಿವಪ್ಪನವರು ಹೇಳಿರುವ ಮಾತಿಗೆ, ಹೊಸ ಕೆರೆ ನಿರ್ಮಾಣಕ್ಕೆಂದೇ ನಮ್ಮ ಆಯವ್ಯಯದಲ್ಲಿ ಹಣ ಇದೆ. ಅವರು ಜಾಗ ತೋರಿಸಿ, ಇಂತಹ ಜಾಗದಲ್ಲಿ ಹೊಸ ಕೆರೆ ನಿರ್ಮಾಣ ಮಾಡಬೇಕೆಂದು ಹೇಳಿದರೆ ಯಾವುದೇ ತರಹದ ಅಭ್ಯಂತರವಿಲ್ಲದೆ ಹೊಸ ಕೆರೆ ಮಾಡುತ್ತೇವೆ. ಏಕೆಂದರೆ, ಹೊಸ ಕೆರೆ ನಿರ್ಮಾಣ ಮಾಡಲಿಕ್ಕೆ ಇವತ್ತು ಜಾಗ ಬೇಕು. ಹೂಳು ತೆಗೆಯತಕ್ಕ ಹಣಕಾಸಿನಲ್ಲೇ, ಇದನ್ನು ಬಿಟ್ಟುಬಿಟ್ಟು ಹೊಸಕೆರೆಯನ್ನೂ ಮಾಡಿ, ರೈತರಿಗೆ ಯಾವ ತರಹ ಬೇಕೋ ಆ ತರಹ ಮಾಡಲಿಕ್ಕೂ ಅನುಕೂಲ ಇದೆ. ಆದರೆ, ಹೂಳು ತೆಗೆಯತಕ್ಕಂಥಾದ್ದು ಒಂದು ಸಮಸ್ಯೆ. ಏಕೆಂದರೆ, ಆ ಹೂಳನ್ನು ತೆಗೆದುಕೊಂಡು ಹೋಗಿ ಎಲ್ಲಿ ಹಾಕಬೇಕೆಂಬುದೂ ಇದೆ. ಬಯಲುಸೀಮೆಯಾದರೆ, ಸ್ವಲ್ಪ ದೂರಕ್ಕೆ ತೆಗೆದುಕೊಂಡು ಹೋಗಿ ಹಾಕಬಹುದು. ಆದರೆ, ಮಲೆನಾಡು ಭಾಗದಲ್ಲಿ ಎಲ್ಲಿ ಹಾಕಬೇಕೆಂದು ಸಮಸ್ಯೆ. ಏಕೆಂದರೆ, ಇರುವ ಜಾಗದಲ್ಲಿಯೇ ಸ್ವಲ್ಪ ಉಳುಮೆ ಮಾಡಿಕೊಂಡಿದ್ದೇವೆ. ಅಲ್ಲಿಗೆ ಹೂಳು ತೆಗೆದುಕೊಂಡು ಹೋಗುವುದು ಕಷ್ಟವಿದೆ. ಹಾಗಾಗಿ, ಈ ಚಿಂತನೆಯನ್ನು

ಅಲ್ಲಿಯೇ ಖುದ್ದಾಗಿ ಮಾಡುವುದಕ್ಕೆ ಇಂಜಿನಿಯರುಗಳೂ ಸೇರಿಕೊಂಡು ಮಾಡುವುದಕ್ಕೆ ಸಮಸ್ಯೆ ಬರುತ್ತದೆಂದು, ನೀರು ಬಳಕೆದಾರರ ಸಹಕಾರ ಸಂಘಗಳ ಮೂಲಕ ರೈತರಿಗೆ ಅನುಕೂಲವಾಗತಕ್ಕ ನಿಟ್ಟಿನಲ್ಲಿ, ಅವರ ಜೊತೆ ಸಮಾಲೋಚನೆ ಮಾಡಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಹೊಸ ಕೆರೆ ನಿರ್ಮಾಣ ಮಾಡಬೇಕೆಂದು ತಾವು ಪ್ರಸ್ತಾವನೆ ಕೊಟ್ಟರೆ, ನಾವು ಹೊಸ ಕೆರೆಯನ್ನೂ ತೆಗೆದುಕೊಳ್ಳಬಹುದು.

ಶ್ರೀ ಆರ್. ನಾರಾಯಣ: ಮಾನ್ಯ ಅಧ್ಯಕ್ಷರೇ, ತಾವೊಂದು ಸಲಹೆಯನ್ನು ಕೊಟ್ಟರೆ, ಆ ಬಗ್ಗೆ ನಮಗೆ ಸ್ವಲ್ಪ ಭಿನ್ನಾಭಿಪ್ರಾಯ ಇದೆ. ಕೆರೆಗಳ ಹೂಳನ್ನು ತೆಗೆಯಬೇಕಾದರೆ 3-4 ವರ್ಷಗಳಲ್ಲಿ ಕೆರೆ ತುಂಬಿದೆಯೋ ಇಲ್ಲವೋ ಎಂಬ ಮಾಹಿತಿಯನ್ನು ಆಧರಿಸಿ ಹೂಳು ತೆಗೆಯಬೇಕೆಂಬ ಸೂಚನೆಯನ್ನು ಮಂತ್ರಿಗಳಿಗೆ ಕೊಟ್ಟಿದ್ದೀರಿ, ಮಂತ್ರಿಗಳು ಒಪ್ಪಿದ್ದಾರೆ. ಬಹುಶಃ ಈ ಸಲಹೆಯನ್ನು ನಾನು ಒಪ್ಪಲಿಕ್ಕೆ ತಯಾರಿಲ್ಲ. ಕಾರಣ ಈ ಮಾಹಿತಿ ತೆಗೆದುಕೊಂಡರೆ, ಕಳೆದ 7-8 ವರ್ಷಗಳಿಂದ ಬಹಳಷ್ಟು ಕೆರೆಗಳು ತುಂಬಿರುವುದಿಲ್ಲ. ಆಗ ಯಾವ ಕೆರೆಯ ಹೂಳನ್ನು ತೆಗೆಯುವ ಕಾರ್ಯಕ್ರಮ ಪಾಕುವಹಾಗಿಲ್ಲ. ಮಾನ್ಯ ಶಿವಪ್ಪನವರು ತಿಳಿಸಿದ ಪ್ರಕಾರ, ಬರೀ ಹೂಳೆತ್ತುವ ಕಾರ್ಯಕ್ರಮದಿಂದಲೇ, ಸಂಪೂರ್ಣವಾಗಿ ಕೆರೆಗಳ ಜಲಸಂವರ್ಧನೆ ಆಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಹೂಳು ತೆಗೆದ ಮೇಲೆ, ಮಳೆ ಬಂದು ನೀರು ಹೆಚ್ಚು ಸಂಗ್ರಹವಾದಾಗ, ಅದನ್ನು ತಡೆಯತಕ್ಕ ಶಕ್ತಿ ಆ ಕೆರೆಯ ಏರಿಗೂ ಇರಬೇಕಾಗುತ್ತದೆ. ಸರ್ವ ರೀತಿಯಿಂದಲೂ ಸಹ ಕೆರೆಯನ್ನು ರೆಸ್ಟೋರ್ ಮಾಡತಕ್ಕ ಕಾರ್ಯಕ್ರಮ ನಮ್ಮ ಜಲಸಂವರ್ಧನಾ ಇಲಾಖೆಗೆ ಇದೆಯೆಂದು ನಾನು ಭಾವನೆ ಮಾಡುತ್ತೇನೆ. ಎಲ್ಲದಕ್ಕಿಂತ ಮುಖ್ಯವಾಗಿ, ಮೂಲತಃ ಒತ್ತುವರಿ ಏನಿದೆ, ಅದನ್ನು ತೆರವು ಮಾಡುವುದಕ್ಕೆ ನಾವು ಪ್ರಥಮ ಆದ್ಯತೆಯನ್ನು ಕೊಟ್ಟು ತೆರವು ಮಾಡಬೇಕು. ತದನಂತರ ಹೂಳು ತೆಗೆಯಬೇಕು. ಮತ್ತು ಇನ್ನಿತರ ಎಲ್ಲಾ ರೀತಿಯ ತೂಬು ಇರಬಹುದು, ಏರಿ ಇರಬಹುದು, ಕೋಡಿ ಇರಬಹುದು ಹೀಗೆ ಎಲ್ಲಾ ರೀತಿಯ ರಿಪೇರಿ ಮಾಡಿದರೆ ಮಾತ್ರ ಪಕ್ಕಾ ಕೆರೆ ಆಗಿ, ರೆಸ್ಟೋರ್ ಮಾಡತಕ್ಕ ಸ್ಥಿತಿಗೆ ಬರುತ್ತದೆ. ಇನ್ನೊಂದು ತಮ್ಮ ಸಲಹೆಗೆ, ನನ್ನ ಕೌಂಟರ್ ಸಲಹೆ ಏನೆಂದರೆ, ನಮ್ಮ ತುಮಕೂರು ಜಿಲ್ಲೆಯಲ್ಲಿ ಅನೇಕ ಕೆರೆಗಳು, ದೊಡ್ಡ ಕೆರೆಗಳು, ನಿಟ್ಟೂರು, ಕಡಬಾ, ಬೀದರೆ ಈ ಕೆರೆಗಳು 15-20 ವರ್ಷಗಳಿಂದ ತುಂಬಿಯೇ ಇಲ್ಲ. ಆದರೆ, ಹೇಮಾವತಿ ನೀರನ್ನು ಹರಿಸುವಂಥ ಸಂದರ್ಭದಲ್ಲಿ ಆ ಕೆರೆಗಳು ಸಂಪೂರ್ಣವಾಗಿ ಭರ್ತಿಯಾಗಿದೆ. ಇವತ್ತು ಸಹಸ್ರಾರು ಎಕರೆಗೆ ನೀರನ್ನು ಕೊಡತಕ್ಕ ಪರಿಸ್ಥಿತಿ ಆಗಿದೆ. ಅದು ತಮಗೂ ಗೊತ್ತಿದೆ. ತಾವೂ ಕೂಡ ಬಹಳ ಮುತುವರ್ಜಿ ವಹಿಸಿದ್ದೀರಿ. ನೇತ್ರಾವತಿ ನೀರು ಪಶ್ಚಿಮಕ್ಕೆ ಹೋಗುತ್ತಿರುವುದನ್ನು ತಿರುಗಿಸಿ ಸುಮಾರು ಹತ್ತೂವರೆ ಸಾವಿರ ಕೆರೆಗಳನ್ನು ತುಂಬಿಸತಕ್ಕ ಕಾರ್ಯಕ್ರಮಕ್ಕೆ, ಉತ್ತಮವಾದ ಚಾಲನೆಯನ್ನು ತಾವು ಕೊಟ್ಟಿದ್ದೀರಿ. ಬಹುಶಃ ಅದು ಏನಾದರೂ ಕಾರ್ಯಗತವಾದಂಥ ಪಕ್ಷದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬರತಕ್ಕ ನೀರನ್ನು ಸಂಗ್ರಹಣೆ ಮಾಡತಕ್ಕ ಶಕ್ತಿಯನ್ನು ಇವತ್ತು ಕೆರೆಗಳು ಪಡೆಯಬೇಕಾಗುತ್ತದೆ. ಆ ದೃಷ್ಟಿಯಿಂದ ಒಂದು ಕಾಕತಾಳೀಯ ರೀತಿಯಲ್ಲಿ ಆ ಯೋಜನೆಯೂ ಪ್ರಾರಂಭವಾಗಿ, ಈ ನಮ್ಮ ಜಲಸಂವರ್ಧನಾ ಯೋಜನೆಯ ಕಾರ್ಯಕ್ರಮದಲ್ಲಿ ಒಂದುಸಾವಿರ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ 5 ಸಾವಿರ ಕೆರೆಗಳ ಹೂಳನ್ನು ತೆಗೆಯತಕ್ಕ ಕಾರ್ಯಕ್ರಮವೂ ಇದೆ. ಈ ಎರಡೂ ಕಾರ್ಯಗತವಾದರೆ, ನಮಗೆ ಉಳಿದಿರತಕ್ಕ 4 ವರ್ಷಗಳಲ್ಲಿ ರೈತ ಸಮುದಾಯಕ್ಕೆ ಕರ್ನಾಟಕ ರಾಜ್ಯದಲ್ಲಿ ದೊಡ್ಡ ಉಪಕಾರವಾಗುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು: ನೀವು ಭಾಷಣ ಮಾಡಬೇಡಿ, ಈಗಾಗಲೇ ಪ್ರಶ್ನೋತ್ತರಗಳ ವೇಳೆಯ ಮೇಲೆ 5 ನಿಮಿಷ ಜಾಸ್ತಿಯಾಗಿದೆ. ನಾವು ಹೇಳುವುದು ಉತ್ತಮವಾದ ಸಲಹೆಗಳು, ಅವುಗಳನ್ನು ಒಪ್ಪಿಕೊಳ್ಳುತ್ತೇನೆ. ಆದರೆ, ಭಾಷಣ ಬೇಡಿ, ಪ್ರಶ್ನೆಯನ್ನು ಮಾತ್ರ ಕೇಳಿ. ನಮ್ಮಮುಂದೆ ಇನ್ನೂ 3-4 ಪ್ರಶ್ನೆಗಳು ಇವೆ.

ಶ್ರೀ ಆರ್. ನಾರಾಯಣ: ಇವತ್ತು ಕೆರೆಗಳಿಗೆ ನೀರು ಬರಲು, ಅಂತರ್ ಜಲವೂ ಸಹ ಅಭಿವೃದ್ಧಿಯಾಗಬೇಕಾಗಿದೆ. ಮಳೆ ಒಂದು ಸಾರಿ ಕಡಿಮೆಯಾಗಬಹುದು, ಒಂದುಸಾರಿ ಜಾಸ್ತಿಯಾಗಬಹುದು. ಯಾವ ವರ್ಷದಲ್ಲಿ ಯಾವ ಪ್ರಮಾಣದಲ್ಲಿ ಮಳೆ ಬರುತ್ತೆ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಆದುದರಿಂದ, ಕೆರೆಗಳಲ್ಲಿ ಸಂಪೂರ್ಣವಾಗಿ ನೀರು ಇರಬೇಕೆಂಬ ದೃಷ್ಟಿಯಿಂದ, ಅವನ್ನು ರೆಸ್ಟೋರ್ ಮಾಡಿ, ಹಿಂದೆ ಏನು 50 ವರ್ಷಗಳ ಇತಿಹಾಸದ ಗತವೈಭವ ಇತ್ತೋ ಆ ಮಟ್ಟಕ್ಕೆ ತರಬೇಕಾಗುತ್ತದೆ. ಇದು ರೈತರಿಗೆ ಕೊಡತಕ್ಕ ಸರ್ಕಾರದ ದೊಡ್ಡ ಕೊಡುಗೆ ಎಂದು ನಾನು ಹೇಳುತ್ತೇನೆ. ಮಾನ್ಯ ಕುಮಾರ್ ಬಂಗಾರಪ್ಪನವರ ತಂದೆ ಕಾಲದಲ್ಲಿ ಪ್ರಥಮವಾಗಿ ಇದಕ್ಕೊಂದು ಚಾಲನೆ ಸಿಕ್ಕಿತ್ತು. ವಿಶ್ವಬ್ಯಾಂಕ್ ನೆರವನ್ನು ಪಡೆದು, ಅವರ ಕಾಲದಲ್ಲಿ ಇದು ಮೂವ್ ಆಗಿದ್ದು. ಅವರ ತಂದೆಯ ಕಾರ್ಯಕ್ರಮಕ್ಕೆ ಮಗನೇ ಮುಂಚೂಣಿಯಲ್ಲಿರತಕ್ಕಂಥದ್ದು ವಿಶೇಷ ರೀತಿಯಲ್ಲಿ ಸಂತೋಷವಾಗುತ್ತದೆ. ಈಗಾಗಲೇ ಅಪಸ್ವರ ಎದ್ದಿದೆ. ಎಲ್ಲಿ ಆಯಿತು, ಎಲ್ಲಿ ಮಾಡಿದರು. ನಾವೂ ಕೂಡ ಒಪ್ಪಿಕಾರುವುದಕ್ಕೆ ಆಗುತ್ತಾ ಇಲ್ಲ. ನಾವು ಹೋದ ಕಡೆಯಲ್ಲೆಲ್ಲಾ ರೈತರಿಗೆ ಬೇಕಾದ ವಿಷಯ ಎಂದು ಭಾಷಣ ಮಾಡುತ್ತಲೇ ಇರುತ್ತೇವೆ. ಜನರೂ ಕೇಳುತ್ತಾರೆ. ಏನ್ರಿಸ್ವಾಮಿ ಹೇಳುತ್ತಲೇ ಇದ್ದೀರಿ, ಒಂದು ಕೆರೆಯ ಹೂಳನ್ನೂ ತೆಗೆಯಲಿಲ್ಲವೆಂದು ಕೇಳುತ್ತಾರೆ. ಅಲ್ಲಿ ಇರತಕ್ಕಂಥ ಪರಿಸ್ಥಿತಿ ನಮಗೆ ಅರ್ಥವಾಗಿದೆ. ವಿಶ್ವಬ್ಯಾಂಕಿನವರಿಂದ ಲೋನ್ ಬರುವುದು ಸ್ವಲ್ಪ ಡಿಲೇ ಆಗುತ್ತಾ ಇದೆ. ಜೊತೆಗೆ ಜುಡ್ಕೋದಿಂದ 200 ಕೋಟಿ ರೂಪಾಯಿಗಳು ಬರುತ್ತದೆಂದು ಹೇಳುತ್ತಿದ್ದಾರೆ. ನನ್ನ ಕಳಕಳಿ ಇಷ್ಟೆ. ಹೆಚ್ಚಿನ ಮುತುವರ್ಜಿ ಮಾಡಿ, ಆದಷ್ಟು ಬೇಗ ಈ ಕಾರ್ಯಕ್ರಮ ಮಾಡಬೇಕು. ಇನ್ನೊಂದು ಪ್ರಶ್ನೆ, ಕೆರೆಯಲ್ಲಿ ನೀರು ಇದ್ದರೆ ಹೇಗೆ ಹೂಳು ತೆಗೆಯುವುದು? ಕೆಲವು ಕಡೆ ನೀವು ಹೂಳು ತೆಗೆಯುವುದಾದರೆ, ಇರತಕ್ಕ ನೀರನ್ನೆಲ್ಲಾ ಬಿಟ್ಟುಬಿಡುತ್ತೇವೆಂದು ಹೇಳುತ್ತಾರೆ. ಅದಕ್ಕೆ ನೀರಾವರಿ ಸಹಕಾರ ಸಂಘಗಳು ಏನಿವೆ, ಇವುಗಳಿಂದ ಜನರಿಗೆ ನಂಬಿಕೆ ಬರುವ ರೀತಿಯಲ್ಲಿ ಕೆಲಸ ಮಾಡಬೇಕು. ಇವತ್ತು ಅಲ್ಲೊಂದು ಅಪಸ್ವರ ಇದೆ.

ಅಧ್ಯಕ್ಷರು: ಸಪ್ಲಿಮೆಂಟರಿ ಪ್ರಶ್ನೆಯನ್ನು ಕೇಳಿ.

ಶ್ರೀ ಆರ್. ನಾರಾಯಣ: ಇವತ್ತು ಪ್ರಶ್ನೋತ್ತರ ವೇಳೆ ಪರಿವರ್ತನೆಯಾಗಿದೆ. ಗೃಹ ಇಲಾಖೆ ಮೇಲೆ ಎಲ್ಲರಿಗೂ ಸರಳವಾಗಿ ತಾವು ಅವಕಾಶ ಕೊಟ್ಟಿದ್ದೀರಿ. ಅದಕ್ಕಿಂತಲೂ ಪ್ರಾಮುಖ್ಯವಾದುದು ನೀರಾವರಿ ಇಲಾಖೆ. ಹೆಚ್ಚು ಕಡಿಮೆ ನಮ್ಮ ಸುರೇಶ್ ಕುಮಾರ್ ಹೇಳಿದಹಾಗೆ, ಇವತ್ತು ಬೇಡಿಕೆ ಮೇಲೆ ಚರ್ಚೆಯಾಗುತ್ತದೆ. ಆಗಲಿ, ಒಳ್ಳೆಯ ಅವಕಾಶ ಇದೆ, ಪ್ರಮುಖ ವಿಚಾರಗಳು ಪ್ರಸ್ತಾಪಕ್ಕೆ ಬರುತ್ತಿವೆ. ಎಲ್ಲರ ಅನಿಸಿಕೆಗಳನ್ನೂ ಕೇಳುವುದಕ್ಕೆ ಅವಕಾಶವಾಗುತ್ತಿದೆ. ಈ ದೃಷ್ಟಿಯಿಂದ ನಾನು ಎತ್ತಿರತಕ್ಕ ಕೆಲವು ವಿಚಾರಗಳಿಗೆ ಸನ್ಮಾನ್ಯ ಸಚಿವರು ಬಹಳ ಗಹನವಾಗಿ ಪರಿಗಣಿಸಿ ಕಾರ್ಯಕ್ರಮ ಮಾಡುವಾಗ ಇವುಗಳನ್ನೆಲ್ಲಾ ಗಮನದಲ್ಲಿಟ್ಟುಕೊಳ್ಳಬೇಕೆಂದು ತಮ್ಮ ಮೂಲಕ ಸಲಹೆಗಳನ್ನೂ ಒಳಗೊಂಡಂತೆ ನನ್ನ ಅಭಿಪ್ರಾಯಗಳನ್ನು ತಿಳಿಸಿ ತಮಗೆ ವಂದನೆಗಳನ್ನು ಸಲ್ಲಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು: ಮಾನ್ಯ ಕುಮಾರ್ ಬಂಗಾರಪ್ಪನವರೇ, ನಾನು ಯಾವುದೋ ಪುಸ್ತಕದಲ್ಲಿ ಓದಿರುವ ಪ್ರಕಾರ ಈ ಕೆರೆಗಳು ಚೋಳರಾಜರ ಕಾಲದಲ್ಲಿ, ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ ಕಟ್ಟಿರತಕ್ಕಂಥ ಕೆರೆಗಳು. ವಿಜಯನಗರ ಸಾಮ್ರಾಜ್ಯದ ಕೃಷ್ಣದೇವರಾಯರು ರಾತ್ರಿಹೊತ್ತು ಮಲಗುವುದಕ್ಕೆ ಮೊದಲು ಒಂದು ವಾರ್ತೆ ಬರಬೇಕು. ಅದೇನೆಂದರೆ, ಒಂದು ಕೆರೆ ಪೂರ್ಣವಾಗಿ ಕಟ್ಟಲಾಗಿದೆ ಮತ್ತು ಒಂದು ದೇವಸ್ಥಾನ ಪೂರ್ಣವಾಗಿ ಕಟ್ಟಲಾಗಿದೆ ಎಂದು ಅವರಿಗೆ ವಾರ್ತೆ ಬಂದಮೇಲೆ ಅವರು ಮಲಗುತ್ತಿದ್ದರಂತೆ. ಅಂಥ ಕೆರೆಗಳನ್ನೆಲ್ಲಾ ಈಗ ರಿಪೇರಿ ಮಾಡಿ ಉಳಿಸಿಕೊಳ್ಳುವುದು ನಿಮ್ಮ ಕೆಲಸವಾಗಿದೆ. ದಯವಿಟ್ಟು ಸ್ವಲ್ಪ ಹೆಚ್ಚಾಗಿ ಮುತುವರ್ಜಿ ವಹಿಸಿ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಆಗಲಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ್: ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ಈ ವಿಷಯ ಇಲ್ಲಿ ಪ್ರಸ್ತಾಪವಾಗಿತ್ತು. ನಮ್ಮ ರಾಜ್ಯದಲ್ಲಿ ಎಷ್ಟು ಕೆರೆಗಳು ಇವೆ, ಅವುಗಳ ರಿಪೇರಿ ಕೆಲಸ ಮತ್ತು ಹೂಳು ಎತ್ತುವಂತಹ ಕೆಲಸ ಅಮೇಲೆ ಮಾಡೋಣ, ಮೊದಲು ಎಷ್ಟು ಜಾಗ ಇದೆ ಎನ್ನತಕ್ಕಂಥಾದ್ದನ್ನು ಸರ್ವೆ ಮಾಡಬೇಕೆಂದು ಹೇಳಿದ್ದೆವು. ಒಂದು ವಾರದಲ್ಲಿ ಸರ್ಕಾರದವರು ಆದೇಶವನ್ನು ಹೊರಡಿಸುತ್ತೇವೆ ಎನ್ನತಕ್ಕಂಥಾ ಮಾತನ್ನು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದರು. ಈ ಮಾತು ಹೇಳಿ 6 ತಿಂಗಳ ಮೇಲಾಯಿತು. ಸರ್ಕಾರಿ ಆದೇಶ ಬಂದಿಲ್ಲ. ಸರ್ವೆಯರ್ಸ್ ಬಂದಿಲ್ಲ. ತಾವು ಹೇಳಿದಿರಲ್ಲ ಕೃಷ್ಣದೇವರಾಯನ ಕಾಲದಲ್ಲಿ ಒಂದು ದಿನಕ್ಕೆ ಒಂದು ದೇವಸ್ಥಾನ ಮತ್ತು ಒಂದು ಕೆರೆ ಕಟ್ಟಿದ್ದಾರೆ ಎನ್ನುವ ಸುದ್ದಿ ಬಂದ ಮೇಲೆಯೇ ಅವರು ಮಲಗುತ್ತಿದ್ದರು ಎಂದು, ಆದರೆ ಈಗ ಏನಾಗಿದೆ ಅಂದರೆ ಯಾವ ಕೆರೆಯನ್ನು ಎಷ್ಟು ಒತ್ತುವರಿ ಮಾಡಿದ್ದಾರೆ ಎನ್ನುವ ಆದೇಶ ಬಂದ ಮೇಲೆಯೇ ಮಾನ್ಯ ಮಂತ್ರಿಗಳು ಮಲಗುವುದು. ಆದ್ದರಿಂದ ತಾವು ದಯಮಾಡಿ ಇನ್ನೊಂದು ಆದೇಶ ಕೊಡಿ ಮುಂದಿನ ಅಧಿವೇಶನ ಸೇರುವುದರೊಳಗೆ ಯಾವ ಯಾವ ಕೆರೆ ಎಷ್ಟೆಷ್ಟು ಎಕರೆ ಇದೆ ಎಂದು ಸರ್ವೆ ಮಾಡಿ ಸದನಕ್ಕೆ ಮಾಹಿತಿ ಕೊಡಬೇಕು ಎನ್ನುವ ಆದೇಶ ಕೊಡಿ.

ಶ್ರೀ ಎನ್. ಸಂಪಂಗಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ರೈತರ ಜೊತೆ ಸಹಕರಿಸಿ ಹೂಳು ಎತ್ತುತ್ತೇವೆಂದು ಹೇಳಿದ್ದಾರೆ. ನಮ್ಮ ಕ್ಷೇತ್ರದಲ್ಲಿ ರೈತರ ಬಳಿ ಟ್ಯಾ್ಕ್ಟರ್ಸ್ ಇಲ್ಲ. ಇದು ಸರ್ಕಾರಕ್ಕೂ ಗೊತ್ತಿದೆ. 57 ಲಕ್ಷ ರೂಪಾಯಿಗಳನ್ನು ಕಳೆದ ಸಲ ಕೊಟ್ಟರು. ಅಲ್ಲಿ ಮಳೆ ಇಲ್ಲ. ವಲಸೆ ಹೋಗುವಂತಹವರನ್ನು ಉಳಿಸಿಕೊಳ್ಳಬೇಕೆಂದು ಸರ್ಕಾರ ಒಂದು ಕಾರ್ಯಕ್ರಮ ಕೊಟ್ಟಿತು. ಇವತ್ತು ಅಲ್ಲಿ ಟ್ಯಾ್ಕ್ಟರ್ಸ್ ಇಲ್ಲ. ರೈತರ ಜೊತೆ ಸಹಕರಿಸಿ ಹೂಳು ಎತ್ತುವ ಕಾರ್ಯಕ್ರಮ ಎಂದು ಹೇಳುತ್ತಾರೆ. ಆದ್ದರಿಂದ ನಾನು ಮಾನ್ಯ ಸಣ್ಣ ನೀರಾವರಿ ಮಂತ್ರಿಗಳನ್ನು ಕೇಳಿಕೊಳ್ಳುವುದು ಇಷ್ಟೇ, ಅಲ್ಲಿ ಟ್ಯಾ್ಕ್ಟರ್ಸ್ ಇಲ್ಲದೇ ಇರುವಂತಹ ಸಂದರ್ಭದಲ್ಲಿ ಮಣ್ಣು ಎತ್ತಿ ಹೊರಗೆ ಹಾಕುವಂತಹ ಕಾರ್ಯಕ್ರಮ ಕೂಲಿ ಕೆಲಸ ಎಂದು ಮಾಡಿ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ್ ಅವರು ಹೇಳಿರುವಂತಹ ಮಾತಿಗೆ ನಾನು ಈಗಾಗಲೇ ಮಾನ್ಯ ಕಂದಾಯ ಸಚಿವರ ಜೊತೆಯಲ್ಲಿ ಮಾತನಾಡಿ ಒಂದು ಪತ್ರವನ್ನು ಸಹ ಬರೆದಿದ್ದೇನೆ. ನಮ್ಮ ಸಣ್ಣ ನೀರಾವರಿ

ಇಲಾಖೆಯಲ್ಲಿ ಸರ್ವೆಯರ್ಸ್ ಬಹಳ ಕಡಿಮೆ ಇದ್ದಾರೆ. ಆದ್ದರಿಂದ ಕಂದಾಯ ಇಲಾಖೆಯ ಸರ್ವೆಯರ್ಸ್‌ನ್ನು ನಮ್ಮ ಇಲಾಖೆಗೆ ಕಳುಹಿಸಿಕೊಡಬೇಕೆಂದು ಕೇಳಿದ್ದೇವೆ. ಎಲ್ಲಾ ಕೆರೆಗಳ ಸರ್ವೆ ಕೆಲಸ ಆಗಬೇಕೆಂದು ಮನವಿ ಬರುತ್ತದೆಯೋ ಅಲ್ಲಿ ನೀವು ಹೋಗಿ ಕೆರೆಗಳ ಸರ್ವೆ ಕೆಲಸ ಮಾಡಿಕೊಡಬೇಕೆನ್ನುವ ನಿರ್ದೇಶನ ಕೊಟ್ಟಿದ್ದಾರೆ. ಹಾಗಾಗಿ ಇವತ್ತು ನೀರು ಬಳಕೆದಾರರ ಸಹಕಾರ ಸಂಘದ ಮೂಲಕ ಯಾರೇ ಬಂದು ಕೆರೆಗಳ ಸರ್ವೆ ಕೆಲಸ ಮಾಡಬೇಕೆಂದು ಬರೆದು ಕೊಟ್ಟರೆ ತಕ್ಷಣ ಸರ್ವೆಕೆಲಸ ಮಾಡಿ ಕೊಡುತ್ತಾರೆ. ಸರ್ವೆ ಮಾಡುವಂಥಾದ್ದು ಬಹಳ ಮುಖ್ಯ. ಈಗ ಏಕೆ ಒತ್ತುವರಿ ಮಾಡಿದ್ದಾರೆಂದರೆ ನೀರು ನಿಂತಿಲ್ಲ ಎಂದು ಒತ್ತುವರಿ ಮಾಡಿದ್ದಾರೆ. ನಾವು ನೀರು ನಿಲ್ಲಿಸುವಂತಾದ್ದಕ್ಕೆ ಮೊದಲು ಆದ್ಯತೆ ಕೊಟ್ಟರೆ ಒತ್ತುವರಿ ಮಾಡಿರತಕ್ಕಂಥವರು ಹಿಂದಕ್ಕೆ ಹೋಗುತ್ತಾರೆ. ಒತ್ತುವರಿ ಮಾಡಿಕೊಂಡಿರುವವರು ಬಹಳಷ್ಟು ಜನ ಕಡುಬಡವರೇ. ಇವತ್ತು ನೀರು ಬಳಕೆದಾರರ ಸಹಕಾರ ಸಂಘಕ್ಕೆ ಆ ಜವಾಬ್ದಾರಿಯನ್ನು ಸಹ ಕೊಟ್ಟಿದೆ. ನಮ್ಮ ಕೆರೆ ನಮ್ಮ ಹಕ್ಕು ಎನ್ನುವ ಕಾರ್ಯಕ್ರಮದ ಮೂಲಕ ಇವತ್ತು ಕಾರ್ಯನಿರ್ವಹಣೆ ಆಗುತ್ತಿದೆ. ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ಏನು ಭರವಸೆ ಕೊಟ್ಟಿದ್ದಾರೆ ಅದು ಈಗಾಗಲೇ ಕಾರ್ಯ ರೂಪಕ್ಕೆ ಬಂದಿದೆ. ಅದೇ ರೀತಿಯಲ್ಲಿ ಮಾನ್ಯ ಸಂಪಂಗಿಯವರು ಹೇಳಿದ ಹಾಗೆ ಟ್ಯಾಕ್ಟರ್ಸ್ ಇಲ್ಲದೇ ಇರುವ ಕಡೆ ಶ್ರಮದಾನ ಎನ್ನುವ ಕಾರ್ಯಕ್ರಮ ಇದೆ. ಅವರು ಮುಂದೆ ಬಂದರೆ ಆ ಕೆಲಸವನ್ನು ಮಾಡಿಸಬಹುದು. ಟ್ಯಾಕ್ಟರ್ಸ್ ಇರುವವರು ಟ್ಯಾಕ್ಟರ್ಸ್ ತರಬಹುದು, ಇಲ್ಲದೇ ಇರತಕ್ಕಂಥವರು ಏನು ಮಾಡುವುದು? ಆದ್ದರಿಂದ ರೈತರ ಜೊತೆ ಸಹಕಾರ ಮಾಡಿಕೊಂಡು ಈ ಕಾರ್ಯಕ್ರಮ ಯಶಸ್ವಿಗೊಳಿಸಬಹುದು.

ಪುರಾತನ ದೇವಸ್ಥಾನದ ಡಾವಂಜೆ ದೇವಸ್ಥಾನ ಗುಡ್ಡದ ಮೇಲಿದ್ದು ಸುತ್ತಲೂ ನದಿ ನೀರು ಹರಿಯುವುದರಿಂದ ತಡೆಗೋಡೆ ನಿರ್ಮಾಣ.

124 (1483) ಶ್ರೀ ಅಭಯಚಂದ್ರ. ಕೆ. (ಮೂಡಬಿದರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಪುರಾತನ ದೇವಸ್ಥಾನದ ಡಾವಂಜೆ ದೇವಸ್ಥಾನ ಗುಡ್ಡದ ಮೇಲಿದ್ದು ಸುತ್ತಲೂ ನದಿ ಹರಿಯುತ್ತಿದ್ದು, ಅದರಿಂದ ನದಿ ಕೊರೆತ ಪ್ರಾರಂಭವಾಗಿ ದೇವಸ್ಥಾನಕ್ಕೆ ಅಪಾಯ ಬರುವ ಮುನ್ನ ತಡೆಗೋಡೆ ಕಟ್ಟಲು ಸರ್ಕಾರ ಮುಂದಾಗುವುದೇ;

2) ಮುಲ್ಕಿ ಕೊಳಚೆ ಕಂಬಳದಲ್ಲಿ ನದಿ ಕೊರೆತದಿಂದ ಆಸಾಹುತ ಸಂಭವಿಸುತ್ತಿದ್ದು, ನದಿದಂಡೆ ಕಟ್ಟಲು ಎಷ್ಟು ಹಣ ಒದಗಿಸಲಾಗಿದೆ;

3) ಮುಲ್ಕಿ ಚಂದ್ರ ಶ್ಯಾನುಭಾಗ ಕುದ್ರುಗೆ ನದಿದಂಡೆ ಕಟ್ಟಲು ಎಷ್ಟು ಹಣ ಒದಗಿಸಲಾಗಿದೆ;

4) ಪಶ್ಚಿಮಾಭಿಮುಖವಾಗಿ ಹರಿಯುವ ನೀರನ್ನು ಕೃಷಿಗಾಗಿ ಸದುಪಯೋಗ ಪಡೆಯಲು ಯೋಜನೆಯನ್ನು ತಯಾರಿಸಲಾಗಿದೆಯೇ; ಹಾಗಿದ್ದಲ್ಲಿ ಚಾಲ್ತಿ ಸಾಲಿನಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುವುದೇ;